ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 40 ಅಕ್ಟೋಬರ್ 4, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜ್ಯ ಸಮಿತಿ ರಾಜಕೀಯ ನಿರ್ಣಯ

ಗೊಂದಲಮಯ ರಾಜಕೀಯ ಪರಿಸ್ಥಿತಿ

ದೇಶದಾದ್ಯಂತ ಇಂದು ಎಲ್ಲಾ ವಿರೋಧ ಪಕ್ಷಗಳು ಸರ್ವಾನುಮತವೆಂಬಂತೆ "ರಾಜೀವ್ ಗಾಂಧಿ ರಾಜೀನಾಮೆ ಕೊಟ್ಟು ಪುನಃ ಜನತೆಯ ಮತವನ್ನು ಪಡೆಯಬೇಕು" ಎಂದು ಎಬ್ಬಿಸಿರುವ ಕೂಗಿನ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳಲ್ಲಿ ಒಂದಾದ ಜನತಾ ಪಕ್ಷವು ಆಡಳಿತೆ ನಡೆಸುತ್ತಿರುವ ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವೀಕ್ಷಿಸುವುದು ಅತ್ಯವಶ್ಯಕವಾಗಿದೆ. ದೇಶದಾದ್ಯಂತ ಎಡ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಪಕ್ಷಗಳು ನಡೆಸುತ್ತಿರುವ ಜನತೆಯ ನಿರ್ದಿಷ್ಟ ಪ್ರಶ್ನೆಗಳ ಮೇಲೆ ನಡೆಯುತ್ತಿರುವ ಹೋರಾಟವು ತೀವ್ರವಾಗಿ ಕರ್ನಾಟಕದಲ್ಲೂ ನಡೆಯಬೇಕಾದರೆ ಈ ವಿಶ್ಲೇಷಣೆ ಬಹಳ ಅವಶ್ಯಕ.

ಗುಂಪುಗಾರಿಕೆ

ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿ ಇಂದು ಗೊಂದಲಮಯ ಸ್ಥಿತಿಯಲ್ಲಿದೆ. ಇದಕ್ಕೆ ಕಾರಣ ಜನತಾ ಸರ್ಕಾರದ ಆಳ್ವಿಕೆಯ ಕುಸಿತ ಹಾಗೂ ರಾಜ್ಯದ ಆಳುವ ಪಕ್ಷದೊಳಗಿನ ಗುಂಪುಗಾರಿಕೆ ಹಾಗೂ ಕಿತ್ತಾಟಗಳು. ಜೊತೆಗೆ ಕೇಂದ್ರದಲ್ಲಿ ಆಳುವ ಪಕ್ಷ ಹಾಗೂ ಕರ್ನಾಟಕದ ಪ್ರಮುಖ ವಿರೋಧ ಪಕ್ಷ ರಾಜ್ಯದ ರಾಜಕಾರಣದಲ್ಲಿ ಮೇಲುಗೈ ಪಡೆಯಲು ನಡೆಸುತ್ತಿರುವ ನಿರಂತರ ಪ್ರಯತ್ನ ಹಾಗೂ ಜನತಾ ಸರ್ಕಾರದ ಮೇಲೆ ನಡೆಸುತ್ತಿರುವ ಧಾಳಿ.

ಕಾಂಗ್ರೈ ಧಾಳಿ

ಇಲ್ಲಿಯವರೆಗೂ ಕಾಂಗ್ರೈನ ಚಟುವಟಿಕೆಗಳೆಲ್ಲವೂ ಶಾಸನ ಸಭೆಯೊಳಗೆ ಕೇಂದ್ರಗೊಂಡಿದ್ದವು. ಕೆಲವು ಸಾರ್ವಜನಿಕರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ತೆಗೆದುಕೊಳ್ಳುವ ಮೂಲಕ ಈಗ ಹೊರಗೆ ಕೂಡ ಚಟುವಟಿಕೆ ಆರಂಭಿಸಿದ್ದಾರೆ. ಜೊತೆಗೆ ಈಗ ಜನಾರ್ಧನ ಪೂಜಾರಿಯವರು ಪ್ರದೇಶ ಕಾಂಗ್ರೆಸ್ (ಐ) ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ ಮತ್ತು ದಿನ ನಿತ್ಯವೂ ರಾಮಕೃಷ್ಣ ಹೆಗಡೆಯವರನ್ನು ಹಾಗೂ ಅವರು ರಾಜ್ಯ ಸರ್ಕಾರದ ಆರ್ಥಿಕವನ್ನು ನಡೆಸುತ್ತಿರುವ ರೀತಿಯನ್ನು ಟೀಕೆ ಮಾಡುತ್ತಿದ್ದಾರೆ.

ಭ್ರಮ ನಿರಸನ

ಈ ಗೊಂದಲಮಯ ಪರಿಸ್ಥಿತಿಗೆ ಬಹುಕಾಲದಿಂದ ಕಾಯುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸಿಗದ್ದರಿಂದ ಜನರಲ್ಲಿ ಉಂಟಾಗಿರುವ ಭ್ರಮನಿರಸನವೂ ಕಾರಣವಾಗಿದೆ. ಕಾಂಗ್ರೈ ಸರ್ಕಾರದೊಡನೆ ಸ್ಪರ್ಧೆಗಿಳಿದು ಎಲ್ಲಾ ರೀತಿಯ ಅಗ್ಗದ ಜನಪ್ರಿಯ ಘೋಷಣೆಗಳನ್ನು ನೀಡಿದ ಜನತಾ ಸರಕಾರಕ್ಕೆ ಈ ಘೋಷಣೆಗಳನ್ನು ಪೂರೈಸಲು ಸಾಧ್ಯವಾಗಿಲ್ಲ.

ಆದರೆ ಜನತಾ ಸರ್ಕಾರದ ವಕ್ತಾರರು ಒಬ್ಬರಾದ ಮೇಲೊಬ್ಬರು ರಾಜ್ಯದ ಆರ್ಥಿಕ ಆತಂಕಕಾರಿ ಸ್ಥಿತಿಯನ್ನು ಮುಟ್ಟಿದೆಯೆಂಬುದನ್ನು ಸಾರುತ್ತಿದ್ದಾರೆ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳಿಗೆ ಭಾರಿ ಪ್ರಮಾಣದಲ್ಲಿ ಹಣ ನೀಡುತ್ತೇವೆಂಬ ಪೊಳ್ಳು ಭರವಸೆ ಬಯಲಿಗೆ ಬಂದಿದೆ. ಈ ಸ್ಥಳೀಯ ಸಂಸ್ಥೆಗಳ ದಿನನಿತ್ಯದ ಖರ್ಚುಗಳನ್ನು ನಿರ್ವಹಿಸಲು ಕೂಡ ಹಣವಿಲ್ಲ.

ಬರಗಾಲ ಪರಿಸ್ಥಿತಿ-ಉದ್ದುದ್ದ ಮಾತುಗಳು

ಬರಗಾಲ ಪರಿಸ್ಥಿತಿ ದಿನದಿಂದ ದಿನಕ್ಕೆ ತೀವ್ರವಾಗುತ್ತಾ ನಡೆದಿದೆ. ಕೇಂದ್ರ ಸರ್ಕಾರಕ್ಕೆ ಧನ ಸಹಾಯಕ್ಕಾಗಿ ನೀಡಿದ ಅನೇಕ ಮನವಿಗಳಿಗೆ ಬರಿಗೈಯ ಉತ್ತರ ದೊರಕಿವೆ. ಜನಾರ್ಧನ ಪೂಜಾರಿ ಹಾಗೂ ರಾಜೀವ್ ಗಾಂಧಿಯವರು ದಿನನಿತ್ಯ ನೂರು ಹತ್ತು ಬರಗಾಲ ಪ್ರದೇಶಗಳಿಗೆ ಎಲ್ಲಾ ಸಹಾಯ ಕೊಟ್ಟದ್ದೇವೆಂಬ ಉದ್ದುದ್ದ ಮಾತುಗಳನ್ನಾಡುತ್ತಿರುವುದಷ್ಟೇ ನಡೆದಿದೆ.

ಭೂಹೀನರಿಗೆ ಭೂಮಿ

ಜನ ಸಾಮಾನ್ಯರ ದರ್ಬರ ಬದುಕಿಗೆ ಸಂಬಂಧಿಸಿದ ಬೇಡಿಕೆಗಳಿಗೆ ಗಮನ ನೀಡಲಾಗುತ್ತಿಲ್ಲ. ಉದಾಹರಣೆಗೆ ನಿರಂತರವಾಗಿ ರೈತರು ಚಳುವಳಿ ಮಾಡುತ್ತಿದ್ದರೂ ಕೂಡ ಅಕ್ರಮ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವ ಭೂಹೀನರಿಗೆ ಬಡ ರೈತರಿಗೆ ಹಕ್ಕುಪತ್ರ ನೀಡುವ ಬಗ್ಗೆ ಯಾವುದೇ ಇತ್ಯರ್ಥ ಮಾಡಲಾಗುತ್ತಿಲ್ಲ. ಅನೇಕ ಕಾರ್ಖಾನೆಗಳು ಮುಚ್ಚಿವೆ. ಸರ್ಕಾರ ಆ ಕಾರ್ಖಾನೆಗಳನ್ನು ತೆರೆಸಿ ಬೀದಿಗೆ ಬಿದ್ದ ಕಾರ್ಮಿಕರಿಗೆ ಸಹಾಯ ಮಾಡುವ ಸ್ಥಿತಿಯಲಿಲ್ಲ.

(8 ನೇ ಪುಟ ನೋಡಿ)

ಬಿ. ಜೆ. ಪಿ. – ಕೇವಲ ಕಾಗದದ ಹುಲಿ

"ಹರ್ಯಾಣಾ ಮುಖ್ಯ ಮಂತ್ರಿ ದೇವೀಲಾಲ್‌ರು ಬಿ.ಜೆ.ಪಿ. ಮತ್ತು ಸಂಯುಕ್ತ ಅಕಾಲಿದಳಗಳನ್ನು ಕೋಲಿಸಿ ಕರೆದ ಸೂರಜ್ ಕುಂಡ್ ಸಭೆಯಲ್ಲಿ ಭಾಗವಹಿಸಿದ ಜಾತ್ಯಾತೀತ ವಿರೋಧ ಪಕ್ಷಗಳು ಎರಡು ಪರ್ಯಾಯ ಮಾರ್ಗಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದೆ. ಒಂದೋ ಎಲ್ಲಾ ಕೋಮುವಾದಿ ಶಕ್ತಿಗಳನ್ನು ದೂರವಿಟ್ಟು ಎಡ ಪಕ್ಷಗಳ ಜತೆಗೆ ಸೇರುವುದು ಅಥವಾ ಎಡ ಪಂಥೀಯರ ವಿರುದ್ಧ ಕೋಮು ವಾದಿಗಳೊಂದಿಗೆ ಸೇರುವುದು" ಎಂದು ಸಿ.ಪಿ.ಐ. (ಎಂ) ಪ್ರಧಾನ ಕಾರ್ಯದರ್ಶಿ ಕಾ. ಇ.ಎಂ. ಎಸ್. ನಂಬೂದಿರಿಪಾದ್ ಹೇಳಿದ್ದಾರೆ.

ಕೇರಳ ರಾಜ್ಯ ಸಮಿತಿಯ ಪತ್ರಿಕೆ "ದೇಶಾಭಿಮಾನಿ"ಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಅವರು ಹೀಗೆ ಬರೆದಿದ್ದಾರೆ. ತಮ್ಮ ರಾಜೀವ್ ವಿರೋಧಿ ಆಂದೋಳನ ಕ್ರಮೇಣ ತೀವ್ರಗೊಳ್ಳುತ್ತಾ ಹೋದಂತೆ ಎಡಪಕ್ಷಗಳು ಅದನ್ನು ಸೇರುತ್ತವೆ ಎಂಬ ಈ ಸಭೆಯ ಪಾತ್ರರ ನಿರೀಕ್ಷೆ ಕೇವಲ "ಹಗಲುಗನಸು" ಎಂದು ಅವರು ವರ್ಣಿಸಿದ್ದಾರೆ ಜನತೆಯ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸಲು ಬಿ.ಜೆ.ಪಿ. ಬಳಸಿದ ಜನತಾ ಪಕ್ಷದ ಕಹಿ ಅನುಭವದ ನಂತರ ಎಡ ಪಕ್ಷಗಳು ಯಾವುದೇ ರೀತಿಯ ಮೂಲಭೂತವಾದದೊಂದಿಗೆ ರಾಜೀ ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದಿವೆ.

ಆದ್ದರಿಂದಲೇ ಎಡ ಪಕ್ಷಗಳು ಅಕ್ಟೋಬರ್ 12 ರಂದು ಕೋಮುವಾದದ ವಿರುದ್ಧ ರಾಷ್ಟ್ರೀಯ ಸಮಾವೇಶ ನಡೆಸಲು ಮುಂದಾಗಿವೆ. ತದನಂತರ ಎಲ್ಲಾ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ತೀವ್ರ ರಾಷ್ಟ್ರೀಯ ಪ್ರಕ್ಷೋಭೆ ನಡೆಸಲಾಗುವುದು. ಇದು ರಾಜೀವ್ ಸರ್ಕಾರದವಿರುದ್ಧ ಆಂದೋಲನದ ಒಂದು ಅಭಿನ್ನ ಅಂಗ. ಯಾಕೆಂದರೆ ಅಧಿಕಾರದಲ್ಲಿ ಮುಂದುವರಿಯಲು ಆ ಸರ್ಕಾರ ಅವಲಂಬಿಸಿರುವುದು ಈ ವಿಚ್ಛಿದ್ರಕಾರೀ ಶಕ್ತಿಗಳನ್ನೇ. ಆಂದೋಲನದಲ್ಲಿ ಜಾತ್ಯಾತೀತ ಪಕ್ಷಗಳ, ಸಂಘಟನೆಗಳ, ಗುಂಪು ಮತ್ತು ವ್ಯಕ್ತಿಗಳ ಸಹಕಾರ ಸಿಗುವುದೆಂದು ಎಡ ಪಕ್ಷಗಳು ನಿರೀಕ್ಷಿಸುತ್ತವೆ.

ಕಾಂಗ್ರೆಸ್ ಆಳ್ವಿಕೆಯ ವಿರುದ್ಧ ಹೋರಾಟದಲ್ಲಿ ಬಿ.ಜೆ.ಪಿ.ಯ ಸಹಕಾರ ಅಗತ್ಯ ಎಂಬ ವಾದದಬಗ್ಗೆ ಹೇಳುತ್ತಾ "ಬಿ.ಜೆ.ಪಿ. ಕೇವಲ ಕಾಗದದ ಹುಲಿ" ಎಂದಿದ್ದಾರೆ. ಕಾಂ. ಇ. ಎಂ. ಎಸ್. ಬಿ.ಜೆ.ಪಿ.ಯ ಮುಖಂಡರೇ ಹಿಂದೀ ಪ್ರದೇಶಗಳನ್ನು ಬಿಟ್ಟು ಇತರೆಡೆ ತಾವೊಂದು ಶಕ್ತಿಯೆಂದು ಹೇಳಿಕೊಳ್ಳುವುದಿಲ್ಲ. ಹಿಂದೀ ಪ್ರದೇಶಗಳಲ್ಲೂ ಕೂಡಾ ಅದರ ಆಧಾರ ನಗರ ಪ್ರದೇಶ ಮಾತ್ರವೇ. ಅಲ್ಲದೆ ತಾನು ಹಿಂದೂ ಜನ ಸಾಮಾನ್ಯರ ಪ್ರತಿನಿಧಿ ಎಂಬ ಅಹಮಿಕೆ ಕೂಡಾ ಸತ್ಯದೂರವಾದದ್ದು ಏಕೆಂದರೆ ಹರಿಜನ ಗಿರಿಜನ ಹಾಗೂ ಹಿಂದುಳಿದ ಕೋಮುಗಳಿಂದಲೂ ದೂರವಾದದ್ದೆ. ಇಡೀ ದೇಶದಲ್ಲಿ ಗಮನಾರ್ಹಸಂಖ್ಯೆಯಲ್ಲಿರುವ ಹಿಂದೂಯೇತರ ಅಲ್ಪಸಂಖ್ಯಾತರಂತೂ ಆರ್.ಎಸ್.ಎಸ್.ನ ಆಕ್ರಮಣಕಾರಿ ಹಿಂದೂ

(8 ನೇ ಪುಟ ನೋಡಿ)

ಇ. ಎಂ. ಎಸ್. ನಂಬೂದಾರಿಪಾದ್

ಕೋಮುವಾದದ ವಿರುದ್ಧ ಅಣಿ ನೆರೆಯಿರಿ

– ಸಿ. ಐ. ಟಿ. ಯು. ಕರೆ

ಬೆಂಗಳೂರಿನಲ್ಲಿ 28.9.87 ರಂದು ಸಭೆ ಸೇರಿದ್ದ ಸಿ.ಐ.ಟಿ.ಯು.ನ ಕರ್ನಾಟಕ ರಾಜ್ಯ ಸಮಿತಿಯು ನವ ದೆಹಲಿಯಲ್ಲಿ ಕೋಮುವಾದ ಮತ್ತು ಪ್ರತ್ಯೇಕತಾವಾದವಿರುದ್ಧ ರಾಷ್ಟ್ರೀಯ ಸಮಾವೇಶ ನಡೆಯುವ 12.10.87 ರಂದು ರಾಜ್ಯಾದ್ಯಂತ ಮೆರವಣಿಗೆ, ಸಭೆಗಳನ್ನು ನಡೆಸುವ ಮೂಲಕ ಕೋಮುವಾದ ಮತ್ತು ಪ್ರತ್ಯೇಕತಾವಾದಗಳ ವಿರೋಧಿ ದಿನವನ್ನು ಆಚರಿಸಬೇಕೆಂದು ರಾಜ್ಯದಲ್ಲಿರುವ ಸಿ.ಐ.ಟಿ.ಯು. ಸಂಘಗಳಿಗೆ ಕರೆ ಕೊಟ್ಟಿದೆ.

ಜಾಗತಿಕ ಶಾಂತಿಗಾಗಿ ಚಳುವಳಿ

ಜಪಾನಿನ ರಾಜಧಾನಿ ಟೋಕಿಯೋದಲ್ಲಿ ಕಳೆದ ಆಗಸ್ಟ್‌ನಲ್ಲಿ ಅಟಂ ಬಾಂಬ್ ಮತ್ತು ಹೈಡ್ರೋಜನ್ ಬಾಂಬ್‌ಗಳ ವಿರುದ್ಧ ನಡೆದ ಜಾಗತಿಕ ಸಮ್ಮೇಳನವು ಕೊಟ್ಟಿರುವ ಕರೆಯ ಪ್ರಕಾರ ಮತ್ತು ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಕೊಟ್ಟಿರುವ ಕರೆಯ ಮೇರೆಗೆ ರಾಜ್ಯಾದ್ಯಂತ 24.10.87 ರಂದು, ವಿಶ್ವರಾಷ್ಟ್ರ ಸಂಸ್ಥೆಯು "ಅಭಿವೃದ್ಧಿಗಾಗಿ ನಿಶ್ಶಸ್ತ್ರೀಕರಣ" ವಾರವನ್ನು ಪ್ರಾರಂಭಿಸುವ ದಿನದಂದು ರಾಜ್ಯದ ಕಾರ್ಮಿಕರು ಮಧ್ಯಾಹ್ನ 12.00 ರಿಂದ 12.05 ರವರೆಗೆ ಐದು ನಿಮಿಷ ಕೆಲಸದ ನಿಲುಗಡೆ ಮಾಡಿ ಜಾಗತಿಕ ಶಾಂತಿಯ ಅಲೆಯೊಂದಿಗೆ ಸೇರಬೇಕೆಂದು ರಾಜ್ಯಸಮಿತಿಯು ಕರೆಕೊಟ್ಟಿದೆ.

ಮಧ್ಯಂತರ ಚುನಾವಣೆ

ಎಲ್ಲಾ ರಂಗಗಳಲ್ಲೂ ಬೆಳೆದು ಇತ್ತೀಚಿನ ತಿಂಗಳುಗಳಲ್ಲಿ ಆಳವಾಗುತ್ತಿರುವ ಬಿಕ್ಕಟ್ಟುಗಳನ್ನು ವಿಶ್ಲೇಷಿಸಿ ಕೋಮುವಾದದ ಬೆಳವಣಿಗೆ, ತೀವ್ರ ಬರಗಾಲ, ರೈತರು ನಿರ್ಗತಿಕರಾಗುತ್ತಿರುವುದು ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ, ವಿಧಾನಸಭಾ ಚುನಾವಣೆಗಳಲ್ಲಿ ಸೋಲು ಎಲ್ಲಾ ರಂಗಗಳಲ್ಲೂ ಸರ್ಕಾರದ ಸೋಲನ್ನು ಗಮನಿಸಿದ ಸಭೆಯು ಜನತೆಯ ಬೇಡಿಕೆಗಳಿಗಾಗಿ ರಾಜೀವ

(8 ನೇ ಪುಟ ನೋಡಿ)

ಭಾರತ, ಅಮೇರಿಕ ಲಸಿಕೆ ಕಾರ್ಯಕ್ರಮ - ಅಪಾಯಕಾರಿ ಒಪ್ಪಂದ

ಭಾರತ ಮತ್ತು ಅಮೇರಿಕಾ ಸಂ.ಸಂಸ್ಥಾನ ಸರ್ಕಾರಗಳು 9ಜುಲೈ 1987 ರಂದು 5 ವರ್ಷಗಳ ಅವಧಿಯ ಲಸಿಕೆ ಕಾರ್ಯಕ್ರಮದ ಬಗ್ಗೆ ಒಪ್ಪಂದಕ್ಕೆ ಸಹಿ ಹಾಕಿವೆ. ಟೈಫಾಯ್ಡ್, ನಾಯಿಕೆಮ್ಮು, ಅತಿಸಾರ, ನಾಯಿ ಕಡಿತ ಮತ್ತು ಕಾಮಾಲೆ ರೋಗ ಮುಂತಾದ ಭಾರತದಲ್ಲಿ ವ್ಯಾಪಕವಾಗಿರುವ ರೋಗಗಳಿಗೆ ಲಸಿಕೆ ಸಂಶೋಧನೆ ಮತ್ತು ಜನರ ಮೇಲೆ ಅದರ ಪ್ರಯೋಗದ 'ಜಂಟಿ' ಕಾರ್ಯಕ್ರಮ ಇದು.

ಮುಖ್ಯವಾಗಿ ಈ ಒಪ್ಪಂದ ಆಧುನಿಕ ಜೀವ-ತಂತ್ರ ಜ್ಞಾನದಿಂದ ತಯಾರಿಸಿದ ಕೃತಕ ಜೀವಿಗಳನ್ನು ಲಸಿಕೆಗೆ ಬಳಸಿ, ಅದರ ಪರಿಣಾಮವನ್ನು ದೊಡ್ಡ ಪ್ರಮಾಣದ ಪ್ರಯೋಗಗಳ ಮೂಲಕ ತಿಳಿಯಲು ಭಾರತದ ಜನರನ್ನು ಅಮೇರಿಕದ ವಿಜ್ಞಾನಿಗಳ ಎದುರು ಒಡ್ಡುತ್ತದೆ.

ಮೇಲುನೋಟಕ್ಕೆ ಸದುದ್ದೇಶದಿಂದ ಕೂಡಿದ, ಒಳ್ಳೆಯ ಕಾರ್ಯಕ್ರಮವೆಂದು ಕಂಡರೂ, ಇದು ಹಲವು ಅಪಾಯಕಾರಿ ಸಾಧ್ಯತೆಗಳನ್ನು ಹೊಂದಿದೆ.

ಈ ಕಾರ್ಯಕ್ರಮದ ಒಟ್ಟು ವೆಚ್ಚ 96 ಲಕ್ಷ ಡಾಲರುಗಳು. ಇದರಲ್ಲಿ 76 ಲಕ್ಷ ಡಾಲರುಗಳನ್ನು ಅಮೇರಿಕನ್ ಸರ್ಕಾರವೇ ವಹಿಸಿಕೊಳ್ಳಲಿದೆ. ಇಂತಹ ಭಾರಿ ವೆಚ್ಚದಲ್ಲಿ ಭಾರತದಂತಹ ಉಷ್ಣ ದೇಶಗಳಲ್ಲಿ ಮಾತ್ರ ವ್ಯಾಪಕವಾಗಿರುವ ರೋಗಗಳಿಗೆ ಲಸಿಕೆ ತಯಾರಿಸುವ ಆತುರ ಇವರಿಗೇಕೆ ? ಮೂರನೆಯ ಜಗತ್ತಿನ ರಾಷ್ಟ್ರಗಳ ಜನಕ್ಕೆ ಬೇಕಾದ ಅವಶ್ಯಕ ಔಷಧಿಗಳಿಂದ ಬಂದ ಭಾರಿ ಲಾಭದಿಂದ ಕೊಬ್ಬಿರುವ ಇವರಿಗೆ, ಇಂತಹ ಕಳಕಳಿ ಇದೆ ಎಂಬುದು ನಂಬಲರ್ಹವೇ ?

ಜೀವ-ತಂತ್ರ ಜ್ಞಾನದ ಬಳಕೆಯ ಅಪಾಯಗಳು

ಆಧುನಿಕ ಜೀವ-ತಂತ್ರಜ್ಞಾನದ ಬೆಳವಣಿಗೆಯಿಂದ ಸಾಧ್ಯವಾಗಿರುವ ಹೊಸ ಸೂಕ್ಷ್ಮ ಜೀವಿಗಳ ಕೃತಕ ತಯಾರಿಕೆ ಬಹಳ ಅಪಾಯಕಾರಿ ತಂತ್ರಜ್ಞಾನ. ಬಹಳ ಕಟ್ಟುನಿಟ್ಟಿನ ಶಿಸ್ತು, ಜಾಗರೂಕತೆ, ಕಾನೂನು ಕಟ್ಟು ಪಾಡುಗಳಿಲ್ಲದೆ ಮಾಡಿದ ಇಂತಹ ಪ್ರಯೋಗಗಳು ಅತ್ಯಂತ ಅಪಾಯಕಾರಿ. ಈಗಾಗಲೇ ಕುಖ್ಯಾತವಾಗಿರುವ ಎ.ಐ.ಡಿ.ಎಸ್. ಏಡ್ಸ್ ರೋಗದ ವೈರಸ್ ಸಿ.ಐ.ಎ. ನಡೆಸುತ್ತಿದ್ದ ಇಂತಹ ಒಂದು ಪ್ರಯೋಗದಿಂದ ಹುಟ್ಟಿದ್ದು ಎನ್ನಲಾಗಿದೆ. ಕೃತಕ ಸೂಕ್ಷ್ಮಜೀವಿಗಳ ಸ್ವಭಾವ, ಪರಿಣಾಮ ಸಂಪೂರ್ಣವಾಗಿ ಅಜ್ಞಾತವಾಗಿರುವುದರಿಂದ ಇಂತಹ ಪ್ರಯೋಗ, ಮಾನವರ ಮೇಲೆ ಪ್ರಯೋಗಿಸುವ ಬಗ್ಗೆ ಅಭಿವೃದ್ಧ ದೇಶಗಳಲ್ಲಿ ಕಠಿಣ ಕಟ್ಟುಪಾಡುಗಳಿವೆ. ಇಂತಹ ಕಟ್ಟುಪಾಡುಗಳು ಭಾರತದಲ್ಲಿ, ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಇಲ್ಲ ಈ "ಮುಕ್ತ" ಅವಕಾಶದ ಪ್ರಯೋಜನ ಪಡೆಯುವುದೇ ಈ ಕಾರ್ಯಕ್ರಮದ ಉದ್ದೇಶವಿದ್ದಂತಿದೆ. ಭಾರತದ ಜನ ಅವರ ಪ್ರಯೋಗಕ್ಕೆ ಬಲಿಪಶುಗಳು.

ಇಂತಹ ಒಂದು ಪಿತೂರಿ ಇದೆ ಎಂಬ ಗುಮಾನಿಗೆ ಬಲವಾದ ಕಾರಣಗಳಿವೆ. ಇಂತಹ ಮಹತ್ವದ ಕಾರ್ಯಕ್ರಮ ಕೈಗೊಳ್ಳುವ ಮೊದಲು ಹಲವು ಸಂಬಂಧಿಸಿದ ತಜ್ಞರನ್ನು ನಿರ್ಲಕ್ಷಿಸಲಾಗಿದೆ. ಸಾಮಾನ್ಯವಾಗಿ ಪಾಲಿಸುವ ನಿಯಮಗಳನ್ನು ಮುರಿಯಲಾಗಿದೆ. ಭಾರತ ವೈದ್ಯಕೀಯ ಸಂಶೋಧನಾ ಸಂಸ್ಥೆ (ಐ.ಸಿ.ಎಂ.ಆರ್) ಯ ಡೈರೆಕ್ಟರ್, ರಕ್ಷಣಾ ಸಚಿವಾಲಯದ ವೈಜ್ಞಾನಿಕ ಸಲಹಾಗಾರರು, ಕಾರ್ಯಕ್ರಮಕ್ಕೆ ಸಹಿ ಹಾಕಿದ ಜೀವ ತಂತ್ರಜ್ಞಾನ ಇಲಾಖೆಯದೇ ಆದ ವೈಜ್ಞಾನಿಕ ಸಲಹಾ ಸಮಿತಿಗಳಿಗೆ ಇದರ ಬಗ್ಗೆ ತಿಳಿಸಿಯೇ ಇಲ್ಲ. ಈ ತರಾತುರಿ ಏಕೆ ? ಇದು ಸದುದ್ದೇಶದ ಕಾರ್ಯಕ್ರಮವಾದರೆ ಈ ಗುಟ್ಟು ಏತಕ್ಕೆ ? ಒಪ್ಪಂದದ ಪತ್ರಿಕೆಗಳನ್ನೂ, ಕರಾರುಗಳನ್ನೂ ಗುಟ್ಟಾಗಿಡಲಾಗಿದೆ.

ಒಪ್ಪಂದದ ದುಷ್ಪರಿಣಾಮಗಳು

ಒಪ್ಪಂದದ ಕರಾರುಗಳು ಗುಟ್ಟಾಗಿಡಲಾಗಿದ್ದರೂ ಹಲವು ಪತ್ರಿಕೆಗಳು ಈ ಒಪ್ಪಂದದ ಅಪಾಯಕಾರಿ ಅಂಶಗಳನ್ನು ಹೊರಗೆಡವಿವೆ.

ಈ ಒಪ್ಪಂದದ ಪ್ರಕಾರ, ಕಾರ್ಯಕ್ರಮದ ಅಂಗವಾಗಿ ಭಾರತದ ಜನರ ಮೇಲೆ ನಡೆಸಿದ ಲಸಿಕೆ ಪ್ರಯೋಗಗಳ ಪರಿಣಾಮದ ವಿವರಗಳು ಭಾರತದಂತಹ ದೇಶಗಳಲ್ಲಿ ಇದ್ದಕ್ಕಿದ್ದಂತೆ ಹೊಸ ರೋಗಗಳನ್ನು ಹುಟ್ಟಿಸಿ ಹಾಕಲು ಉಪಯೋಗಿಸಬಹುದಾದ ಜೈವಿಕ ಶಸ್ತ್ರಾಸ್ತ್ರಗಳ ಬೆಳವಣಿಗೆಯಲ್ಲಿ ಬಳಸುವ ಸಾಧ್ಯತೆ ಇದೆ. ಇದು ಬರಿಯ ಗುಮಾನಿಯಲ್ಲ. 50-70ರ ದಶಕಗಳಲ್ಲಿ ಭಾರತವೂ ಸೇರಿದಂತೆ ಹಲವು ಮೂರನೇ ಜಗತ್ತಿನ ದೇಶಗಳಲ್ಲಿ ಬೇರೆ ಬೇರೆ ಮುಸುಕಿನಲ್ಲಿ ನಡೆಸಿದ ಪ್ರಯೋಗದ ಫಲಿತಾಂಶಗಳನ್ನು ವಿಯೆಟ್ನಾಂ ಮೇಲೆ ನಡೆಸಿದ ರಾಸಾಯನಿಕ, ಜೀವ ವೈಜ್ಞಾನಿಕ ಶಸ್ತ್ರಾಸ್ತ್ರ ಬೆಳವಣಿಗೆಗೆ ಉಪಯೋಗಿಸಲಾಯಿತು.

ಪತ್ರಿಕೆಗಳು ವರದಿ ಮಾಡಿರುವಂತೆ ಈ ಕಾರ್ಯಕ್ರಮದ ಒಂದು ಷರತ್ತೆಂದರೆ ಬಂದ ಫಲಿತಾಂಶಗಳಿಗೆ ಭಾರತದ ಪೇಟೆಂಟ್ (Patent) ಕಾನೂನು ಅನ್ವಯವಾಗಬಾರದು ಎಂದು. ಅದರ ಬದಲಾಗಿ ಅಮೇರಿಕನ್ patent ಕಾನೂನುಗಳು ಅನ್ವಯವಾಗುತ್ತವೆ. ಇವು ಅಭಿವೃದ್ಧಿ ದೇಶಗಳಿಗೆ ಅನುಕೂಲವಾಗಿವೆ. ಮೂರನೇಯ ಜಗತ್ತಿನ ದೇಶಗಳಿಗೆ ಮಾರಕವಾಗಿವೆ. ಎಂಬ ಕಾರಣದ ಮೇಲೆ ಪೇಟೆಂಟ್ ಕಾನೂನುಗಳ ಬಗ್ಗೆ ಪ್ಯಾರೀಸ್ ಸಮಾವೇಶದ ಒಪ್ಪಂದವನ್ನು ಭಾರತ ನಿರಾಕರಿಸುತ್ತಬಂದಿತ್ತು. ಒಪ್ಪಂದದ ಪ್ರಕಾರ ಕಾರ್ಯಕ್ರಮದ ಪ್ರಯೋಗಗಳ ಫಲಿತಾಂಶದ ಒಡೆಯರು ಅಮೇರಿಕನ್ ವಿಜ್ಞಾನಿಗಳು. ಇದನ್ನು ಯಾವುದೇ ಭಾರತೀಯ ಸಂಘಟನೆಗಳು ಉಪಯೋಗಿಸುವಂತಿಲ್ಲ. ಅಂದರೆ ನಮ್ಮ ದೇಶದ ವಿಜ್ಞಾನಿಗಳು ಜತೆ ಗೂಡಿ ಕೆಲಸ ಮಾಡಿ, ನಮ್ಮ ಜನರ ಮೇಲೆ ನಡೆಸಿದ ಪ್ರಯೋಗದ ಫಲಿತಾಂಶಗಳ ಮೇಲೆ ನಮಗೆ ಯಾವುದೇ ಅಧಿಕಾರವಿಲ್ಲ. ಮೇಲೆ ಹೇಳಿದ ಯಾವುದೇ ಷರತ್ತುಗಳಿಲ್ಲ ಎಂದಿಟ್ಟುಕೊಂಡರೂ ಈ ಲಸಿಕೆಗಳನ್ನು ಭಾರಿ ಲಾಭಗಳಿಸಲು ಅಮೇರಿಕನ್ ಕಂಪನಿಗಳು ಬಳಸುತ್ತವೆ ಎಂಬುದು ಸ್ಪಷ್ಟ.

ಇಂತಹ ಜನ-ವಿರೋಧಿ ದೇಶ ವಿರೋಧಿ ಒಪ್ಪಂದಕ್ಕೆ ರಾಜೀವ್ ಗಾಂಧಿ ಸರ್ಕಾರ ಸಹಿಹಾಕಿರುವುದು ವುದು ಅತ್ಯಂತ ಆತಂಕಕಾರಿ. ಸಾಮ್ರಾಜ್ಯಶಾಹಿಗಳಿಗೆ, ವಿದೇಶೀ ಕಂಪನಿಗಳಿಗೆ, ವಿಶ್ವ ಬ್ಯಾಂಕಿಗೆ ಮಣಿದು ಪಾಲಿಸುತ್ತಿರುವ ನೂತನ ಆರ್ಥಿಕ ನೀತಿಯ ಉದಾರವಾದಿ ಧೋರಣೆಯ ಇನ್ನೊಂದು ರಾಕ್ಷಸಾವತಾರವಿದು, ಇದರ ವಿರುದ್ಧ ಎಲ್ಲಾ ದೇಶಪ್ರೇಮಿ ಜನರು ತಮ್ಮ ದನಿ ಎತ್ತಬೇಕಾಗಿದೆ. ಈ ಕಾರ್ಯ ಕ್ರಮಕ್ಕೆ ಹಲವು ಪಟ್ಟಭದ್ರ ಹಿತಾಸಕ್ತಿಯಿರುವ ವಿಜ್ಞಾನಿಗಳು ಬೆಂಬಲ ನೀಡಿದ್ದಾರೆ. ಇವರು ಅರ್ಜೆಂಟೀನಾದಲ್ಲಿ ಅಮೇರಿಕನ್ ವಿಜ್ಞಾನಿಗಳು ಗುಟ್ಟಾಗಿ ನಡೆಸಿದ ಇಂತಹ ಪ್ರಯೋಗಗಳ ಬಗ್ಗೆ ಕುರುಡರಾಗಿದ್ದಾರೆ ಎಂದಷ್ಟೇ ಹೇಳಬಹುದು.

> **ಈ ಒಪ್ಪಂದ ಭಾರತದ ಸಾರ್ವಭೌಮತೆ ಸ್ವಾತಂತ್ರ್ಯಕ್ಕೆ ಮತ್ತು ಅದರ ಪ್ರಜೆಗಳ ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿಯಾಗಿದೆ.... ಈ ಒಪ್ಪಂದ ಒಂದು ನಗ್ನ ದೇಶ ವಿರೋಧಿ ಕ್ರಮ ಇದನ್ನು ಕೂಡಲೇ ರದ್ದು ಮಾಡತಕ್ಕದ್ದು.**
>
> **- ಪಾಲಿಟ್‌ಬ್ಯೂರೋ ಹೇಳಿಕೆ**

ಹೊಸ ರೀತಿಯ ಲಸಿಕೆ

ಲಸಿಕೆಗಳು ಕೆಲಸ ಮಾಡುವ ವಿಧಾನ ಎಲ್ಲರಿಗೂ ತಿಳಿದಿದೆ. ರೋಗ ಉಂಟುಮಾಡುವ ಬ್ಯಾಕ್ಟೀರಿಯಾ ಇತ್ಯಾದಿ ಸೂಕ್ಷ್ಮ ಜೀವಿಗಳನ್ನು ಅಪಾಯಕಾರಿಯಲ್ಲದ ಪ್ರಮಾಣದಲ್ಲಿ ರೀತಿಯಲ್ಲಿ ಮನುಷ್ಯ ದೇಹದಲ್ಲಿ ಸೇರಿಸಿ, ಅದು ದೇಹದಲ್ಲಿ ಸೂಕ್ಷ್ಮಜೀವಿಗಳ ವಿರುದ್ಧ ಹೋರಾಡುವ ಕಣಗಳನ್ನು ಉತ್ಪಾದಿಸುವಂತೆ ಮಾಡುವ ಮೂಲಕ ರೋಗದ ವಿರುದ್ಧ ರಕ್ಷಣೆ ಕೊಡುವುದು. ಹಿಂದೆ ರೋಗಕಾರಕ ಸೂಕ್ಷ್ಮಜೀವಿಗಳನ್ನೇ ಇದಕ್ಕಾಗಿ ಬಳಸುತ್ತಿದ್ದರೆ ಇಂದು ಅದೇ ರೀತಿಯ ಸೂಕ್ಷ್ಮಜೀವಿಗಳನ್ನು ಜೀವ-ತಂತ್ರಜ್ಞಾನ (Bioteehn0l0gy) ವಿಧಾನಗಳಿಂದ ಕೃತಕವಾಗಿ ತಯಾರಿಸುವುದು ಸಾಧ್ಯವಾಗಿದೆ. ಇದೂ ಅಲ್ಲದೆ ಎರಡು ರೋಗಗಳ ಸೂಕ್ಷ್ಮಜೀವಿಗಳ ಜೀವಧಾತುಗಳನ್ನು ಸೇರಿಸಿ ಒಂದು ಕೃತಕ ಸೂಕ್ಷ್ಮಜೀವಿ ತಯಾರಿಸಿ ಲಸಿಕೆಗೆ ಉಪಯೋಗಿಸುವುದಕ್ಕೆ ಬೇಕಾದ ತಂತ್ರಜ್ಞಾನ ಇಂದು ಲಭ್ಯವಿದೆ.

ಅರ್ಜೆಂಟೀನಾ ಪ್ರಯೋಗಗಳು

ನಾಯಿಕಡಿತದ ವ್ಯಾಕ್ಸೀನನ್ನು ಅರ್ಜೆಂಟೀನಾದಲ್ಲಿ ದನಗಳ ಮೇಲೆ ಪ್ರಯೋಗ ಮಾಡಲಾಯಿತು. ಇದರ ಬಗ್ಗೆ ಯಾರಿಗೂ (ಸರಕಾರಕ್ಕಾಗಲಿ, ಸ್ಥಳೀಯ ಅಧಿಕಾರಿಗಳಿಗಾಗಲಿ, ದನಕರುಗಳ ಒಡೆಯರಿಗಾಗಲಿ) ತಿಳಿಸಿರಲಿಲ್ಲ. ಇಂತಹ ಪ್ರಯೋಗಕ್ಕೊಳಗಾದ ಪಶುಗಳಲ್ಲಿ ಈ ಹೊಸ ರೀತಿಯ ಲಸಿಕೆಗಳು ಏನು ಪರಿಣಾಮ ಬೀರುತ್ತವೆ ಎಂಬುದರ ಬಗ್ಗೆ ಯಾವುದೇ ಪೂರ್ವಜ್ಞಾನವಿಲ್ಲ. ಯಾರಿಗೂ ಗೊತ್ತಿಲ್ಲದ್ದರಿಂದ ಇಂತಹ ದನಗಳ ಹಾಲನ್ನು ಎಲ್ಲರೂ ಎಂದಿನಂತೆ ಉಪಯೋಗಿಸುತ್ತಿದ್ದರು. ಈ ಪ್ರಯೋಗಗಳನ್ನು ಅಮೇರಿಕದ ಒಂದು ಇನ್ಸ್‌ಟಿಟ್ಯೂಟ್ ನಡೆಸಿತು. ಜತೆಗೆ ಕೆಲಸ ಮಾಡುತ್ತಿದ್ದ ಅರ್ಜೆಂಟೀನಿಯನ್ ವಿಜ್ಞಾನಿಯೊಬ್ಬರು ಧೈರ್ಯದಿಂದ ಈ ಪ್ರಯೋಗವನ್ನು ಬಹಿರಂಗಗೊಳಿಸಿದಾಗ ಸಾರ್ವಜನಿಕ ಒತ್ತಡದಿಂದ ಈ ಪ್ರಯೋಗ ನಿಲ್ಲಿಸಲಾಯಿತು.

ಅಲ್ಲಿ ಗುಟ್ಟಿನಲ್ಲಿ ನಡೆಯುತ್ತಿದ್ದ ಇಂತಹ ಪ್ರಯೋಗಗಳನ್ನು ಬಹಿರಂಗವಾಗಿ ನಡೆಸಲು ನಾವು ಅಧಿಕೃತವಾಗಿ ಒಪ್ಪಿಕೊಂಡಿದ್ದೇವೆ !

ಶ್ರೀಲಂಕಾ ಬೆಳವಣಿಗೆಗಳು : ಎಲ್. ಟಿ. ಟಿ. ಇ. ಮುಖ್ಯ ಹೊಣೆ

ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೊ ಸೆಪ್ಟೆಂಬರ್ 26 ರಂದು ನೀಡಿದ ಹೇಳಿಕೆಯೊಂದರಲ್ಲಿ ಶ್ರೀಲಂಕಾದಲ್ಲಿ ಹದಗೆಡುತ್ತಿರುವ ಪರಿಸ್ಥಿತಿ ಬಗ್ಗೆ ತನ್ನ ಆತಂಕ ವ್ಯಕ್ತಪಡಿಸಿ ಇದಕ್ಕೆ ಎಲ್.ಟಿ.ಟಿ.ಇ. ಮುಖ್ಯ ಹೊಣೆ ಎಂದಿದೆ.

ಇತ್ತೀಚೆಗೆ ನಡೆದ ಒಪ್ಪಂದ ಶ್ರೀಲಂಕಾದ ಎರಡು ಜನಾಂಗೀಯ ಗುಂಪುಗಳ ನಡುವೆ ಮಾತ್ರವಲ್ಲ, ನಮ್ಮೆರಡು ದೇಶಗಳ ನಡುವಿನ ಸಂಬಂಧಗಳ ಸುಧಾರಣೆಗೆ ರಚನಾತ್ಮಕ ಕಾಣಿಕೆ ನೀಡಿದೆ. ಈ ಸಮಸ್ತ ಪ್ರದೇಶದಲ್ಲಿನ ಶಾಂತಿಯ ದೃಷ್ಟಿಯಿಂದಲೂ ಇದು ಮಹತ್ವದ ಒಪ್ಪಂದ ಶ್ರೀಲಂಕಾದ ಉತ್ತರ ಭಾಗದ ಪೂರ್ವ ಪ್ರಾಂತ್ಯಗಳಲ್ಲಿ ಭಾರತದ ಶಾಂತಿ ಪಾಲನಾ ಪಡೆಗಳ ಚಟುವಟಿಕೆಗಳು ಈ ಒಪ್ಪಂದದ ಅನುಷ್ಠಾನದಲ್ಲಿ ಒಂದು ಅತ್ಯಂತ ಮುಖ್ಯ ಅಂಶ. ಇದನ್ನು ಭಾರತ ಮತ್ತು ಶ್ರೀಲಂಕಾದ ಜನತೆ ಸ್ವಾಗತಿಸಿದೆ. ಶಸ್ತ್ರಾಸ್ತ್ರಗಳನ್ನು ವಾಪಾಸು ಮಾಡುವುದರಿಂದ ತಮಿಳರ ಉದ್ದೇಶದ ಸಾಧನೆಗೆ ತೊಂದರೆಯಾಗುವುದಿಲ್ಲ ಎಂದು ಆಶ್ವಾಸನೆ ಕೂಡಾ ಇತ್ತು. ಆದರೂ ಎಲ್.ಟಿ.ಟಿ.ಇ. ತನ್ನ ಪ್ರತಿ ಸ್ಪರ್ಧಿ ಗುಂಪುಗಳ ವಿರುದ್ಧ ಹತ್ಯಾಕಾರಿ ಹಿಂಸಾಚಾರಕ್ಕಿಳಿದು ಶಾಂತಿಪಾಲನಾ ಪಡೆ ಮಧ್ಯ ಪ್ರವೇಶಿಸಲೇ ಬೇಕಾದ ಪರಿಸ್ಥಿತಿ ಉಂಟುಮಾಡಿದೆ. ಅಷ್ಟೇ ಅಲ್ಲ ಶಾಂತಿಪಾಲನಾ ಪಡೆಯ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳ ಮೂಲಕ ಮುಂಬರುವ ಆಡಳಿತ ಮಂಡಳಿಯಲ್ಲಿ ತನಗೇ ವಿಶಿಷ್ಟ ಸ್ಥಾನಮಾನ ಪಡೆಯಲು ಪ್ರಯತ್ನಿಸುತ್ತಿದೆ. ಇದು ಹೀಗೆ ಮುಂದುವರಿದರೆ ಒಪ್ಪಂದವನ್ನು ಬುಡಮೇಲು ಮಾಡಿದಹೊಣೆ ಅದರದೇ ಆಗುತ್ತದೆ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಎಲ್.ಟಿ.ಟಿ.ಇ. ಖಂಡಿವಾಗಿಯೂ ವಿವಿಧ ತಮಿಳು ಗುಂಪುಗಳ ನಡುವೆ ಮಹತ್ವದ ಸ್ಥಾನ ಪಡೆದಿದೆ. ಆದ್ದರಿಂದ ಅದು ಆಡಳಿತ ಮಂಡಳಿಯಲ್ಲಿ ತನ್ನ ನ್ಯಾಯಯುತ ಪಾಲು ನಿರೀಕ್ಷಿಸುವುದು ಸರಿಯೇ. ಆದರೆ ಇದಕ್ಕಾಗಿ ಅದು ಇತರ ತಮಿಳುಗುಂಪುಗಳನ್ನು ಮುಗಿಸಿಬಿಡಲು ಪ್ರಯತ್ನಿಸುವ ಬದಲು ಅವುಗಳ ನ್ಯಾಯಬದ್ಧ ಆಕಾಂಕ್ಷೆಗಳನ್ನು ಮಾನ್ಯಮಾಡಬೇಕು. ವಿವಿಧ ತಮಿಳು ಗುಂಪುಗಳ ನಡುವೆ ಹಾಗೂ ಶಾಂತಿಪಾಲನಾ ಪಡೆಯೊಂದಿಗೆ ಸಹಕಾರ ಒಪ್ಪಂದದ ಅನುಷ್ಠಾನಕ್ಕೆ ಅತ್ಯಗತ್ಯವೆಂದಿರುವ ಪಾಲಿಟ್‌ಬ್ಯೂರೋ ಎಲ್.ಟಿ.ಟಿ.ಇ. ಭಾರತದ ಶಾಂತಿಪಾಲನಾ ಪಡೆಗಳ ವಿರುದ್ಧ ವೈಷಮ್ಯದ ನಿಲುವುತಳೆದು ಆಡಳಿತ ವ್ಯವಸ್ಥೆಯಲ್ಲಿ ತನಗೆ ಪ್ರಬಲ ಸ್ಥಾನ ಪಡೆಯಲು ಭಾರತೀಯ ಅಧಿಕಾರಿಗಳೊಂದಿಗೆ ಚೌಕಾಸಿಗೆ ಹೇಗೆ ಇಳಿಯುತ್ತದೆಯೆಂಬುದು ಅರ್ಥವಾಗುವುದಿಲ್ಲ ಎಂದಿದೆ.

ಆದ್ದರಿಂದ ಎಲ್.ಟಿ.ಟಿ.ಇ. ಈ ಬಗ್ಗೆ ಸರಿಯಾಗಿ ಯೋಚಿಸುವಂತಾಗಿ ಶಾಂತಿಪಾಲನಾ ಪಡೆ, ಭಾರತೀಯ ಹೈಕ ಮಿಷನ್ ಮತ್ತು ಭಾರತ ಸರ್ಕಾರ ಶ್ರೀಲಂಕಾದ ತಮಿಳು ಪ್ರದೇಶಗಳಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಶಕ್ತವಾಗುತ್ತವೆಯೆಂಬ ಆಶಾಭಾವನೆಯನ್ನು ಹೇಳಿಕೆ ವ್ಯಕ್ತಪಡಿಸಿದೆ.

ಕಾರ್ಮಿಕರ ಮೇಲೆ ಪೊಲೀಸರ ಅಮಾನುಷ ಧಾಳಿ

ಬೆಂಗಳೂರಿನಬಳಿ ಕುಂಬಳಗೋಡು ಎಂಬ ಮೈಸೂರು ಹೆದ್ದಾರಿಯ ಮೇಲಿರುವ ಹಳ್ಳಿಯ ಬಳಿಯ ಉದ್ಯಮ, "ಸಪ್ತಗಿರಿ ಡಿಸ್ಟಿಲರೀಸ್" ಯುನೈಟೆಡ್ ಬ್ರೀವರಿಯ 'ಮ್ಯಾಕ್‌ಡೊವೆಲ್' ಕಂಪನಿಗಾಗಿ ಮದ್ಯ ತಯಾರಿಸುವ ಈ ಕಾರಖಾನೆಯ ಕಾರ್ಮಿಕರೆಲ್ಲಾ ಸುತ್ತಮುತ್ತಲ ಹಳ್ಳಿಯಿಂದ ಬಂದವರು.

ಇತ್ತೀಚೆಗೆ ಪೋಲೀಸರು 8–10 ವ್ಯಾನು, ಜೀಪುಗಳಲ್ಲಿ ಠಳಾಯಿಸುತ್ತಾ ಹಳ್ಳಿಹಳ್ಳಿಗೆ ನುಗ್ಗಿ ಕಾರ್ಮಿಕರನ್ನು ಹಿಡಿಯಲು ಪ್ರಯತ್ನಿಸಿದರು. ಹಿಡಿದವರನ್ನು ದೂರದ ಊರುಗಳಿಗೆ ಸಾಗಿಸಿ ಮೂರನೇ ಡಿಗ್ರಿ ಮಾರ್ಗಗಳನ್ನೆಲ್ಲಾ ಬಳಸಿದರು. ಮಾತ್ರವಲ್ಲ ತಮ್ಮ ಕಾರ್ಖಾನೆಯ ಬಳಿಗೇ ಸುಳಿಯದಂತೆ ಕಾವಲುಕಾದರು. ಕಾರ್ಮಿಕರಸ್ಥೈರ್ಯವನ್ನು ಮುರಿದು ಧೃತಿಗೆಡಿಸಲು ಎಲ್ಲಾ ಪ್ರಯತ್ನ ಮಾಡಿದರು ಎಂದು ಕಾರ್ಮಿಕ ಸಂಘದ ಅಧ್ಯಕ್ಷ ಕೆ.ಎಸ್. ಸುಬ್ರಮಣ್ಯರವರುವರದಿಮಾಡಿದ್ದಾರೆ.

ಇದೆಲ್ಲಾ ಏಕೆ ಗೊತ್ತೇ? ಸರಕಾರದ ತೆರಿಗೆಗಳನ್ನು ಈ ಫ್ಯಾಕ್ಟರಿಯ ಮಾಲೀಕ ಸರಿಯಾಗಿ ಪಾವತಿ ಮಾಡುತ್ತಿಲ್ಲ, ಎಕ್ಸೈಸ್ ತೆರಿಗೆ, ಮಾರಾಟ ತೆರಿಗೆ ಇವುಗಳಲ್ಲಿ ಸರಕಾರಕ್ಕೆ ದಿನಕ್ಕೆ ಲಕ್ಷಾಂತರ ಮೋಸ ಮಾಡುವುದಲ್ಲದೆ ಕಾರ್ಮಿಕರಿಗೂ ಬೋನಸ್ ಲೆಕ್ಕದಲ್ಲಿ ವಂಚಿಸುತ್ತಿದ್ದಾನೆಂದು ಕಾರ್ಮಿಕರು ಎಕ್ಸೈಸ್‌ಕಮೀಷನರ್‌ರವರಿಗೆ ದೂರು ನೀಡಿದ್ದರಿಂದ ಹಾಗೂ ಅಕ್ರಮವಾಗಿ ಒಂದೇ ಒಂದು ಚೂರು ಮದ್ಯವನ್ನು ಆಚೆಗೆ ಹೋಗಲು ಬಿಡದ್ದರಿಂದ.

ಗಣೇಶನ ಹಬ್ಬಕ್ಕೆ ಮೊದಲೇ ಕಾರ್ಮಿಕರಿಗೆ ಶೇ.20ರಷ್ಟು ಬೋನಸ್ ಕೂಡ ನೀಡಲಿಲ್ಲ ಕಾರ್ಮಿಕ ಸಂಘಕ್ಕೆ ಸೇರಿದ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ 18 ವಾಚ್‌ಮೆನ್‌ಗಳ ಮೇಲೆ ದ್ವೇಷ ಸಾಧಿಸಿದರು. ಇದಕ್ಕೆ ಪ್ರತಿಭಟಿಸಿದ್ದಕ್ಕೆ ಪೋಲಿಸರಿಂದ21.9.87ರಂದುಲಾಠಿಚಾರ್ಜ್ ಅಮಾನುಷ ದೌರ್ಜನ್ಯದ ಆರಂಭ. 20 ಮಂದಿ ಕೆಲಸಗಾರರಿಗೆ ತೀವ್ರಗಾಯ. ದಿನಗಟ್ಟಲೆ ಕಾರ್ಮಿಕರನ್ನು ಮನೆಗೆ ಹೋಗದಂತೆ ಮಾಡಿದ ಹಾಗೂ ಮನೆಯವರನ್ನು ಹಿಂಸಿಸಿದರೂ ಧೈರ್ಯಗೆಡದೆ ಇದ್ದುದರ ಫಲವಾಗಿ ಕಾರ್ಮಿಕರ ಹೋರಾಟಕ್ಕೆ ಜಯ ದೊರಕಿತು. ರಾಜ್ಯದ ಬೊಕ್ಕಸಕ್ಕೆ ಆಗುವ ಹಾನಿಯನ್ನು ಎತ್ತಿ ತೋರಿಸಿದ್ದಕ್ಕೆ ಕಾರ್ಮಿಕರ ಮೇಲೆ ದಾಳಿಯೆಸಗಿದ ಪೊಲೀಸರ ಯಾವ ವರ್ಗದ ಕೈಗೊಂಬೆಗಳು ಎಂಬುದು ಮತ್ತೊಮ್ಮೆ ಸಾಬಿತಾಯಿತು.

○

ಅಮಾನವೀಯ ಸತಿ ಪದ್ಧತಿ ಖಂಡನೆ

ರಾಜಸ್ತಾನ ಸಿಕಾರ್ ಜಿಲ್ಲೆಯ ದೇವರಲಾ ಗ್ರಾಮದಲಿ ಸೆಪ್ಟೆಂಬರ್ 4ರಂದು ರೂಪ ಕನ್ವರ್ ಎಂಬ 18 ವರ್ಷದ ವಿದ್ಯಾವಂತ ಯುವತಿ ಸತಿ ಪದ್ಧತಿಗೆ ಬಲಿಯಾದ ಹೃದಯ ವಿದ್ರಾವಕ ಘಟನೆಯನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಯಚೂರು ಜಿಲ್ಲಾ ಸಮಿತಿ ಉಗ್ರವಾಗಿ ಖಂಡಿಸಿದೆ. ಈ ಘಟನೆ ಬೆಂಬಲಿಸಿ ಪ್ರೋತ್ಸಾಹಿಸಿದ ಎಲ್ಲಾ ವ್ಯಕ್ತಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದೆ.

ಆಕೆಯ ಬದುಕನ್ನು ಬಲಿ ಪಶು ಮಾಡಿದಲ್ಲದೆ ದೇವಾಲಯ ಕಟ್ಟಿಸಿ ಸತಿ ಮಹೋತ್ಸವ ಆಚರಿಸಿ 'ಸತಿಮಾತ' ಎಂಬ ಬಿರುದನ್ನು ನೀಡಿ ಸ್ಥಳವನ್ನು ಯಾತ್ರಸ್ಥಳವನ್ನಾಗಿ ಮಾಡಿರುವ ಧರ್ಮಾಂಧರ ನೀತಿಯನ್ನು ಸಂಘಟನೆ ಖಂಡಿಸಿದೆ. ಸತಿ ಪದ್ಧತಿ,ವಿಧವಾ ಪದ್ಧತಿಗಳನ್ನು ನಿರ್ನಾಮಗೊಳಿಸಿ ವಿಧವಾ ವಿವಾಹ ಪ್ರೋತ್ಸಾಹಿಸಲು ಅಮಾನವೀಯ, ಅವೈಜ್ಞಾನಿಕ ಮೌಲ್ಯಗಳ ವಿರುದ್ಧ ನಿರಂತರ ಹೋರಾಟ ನಡೆಸಲು ಜಿಲ್ಲಾ ಅಧ್ಯಕ್ಷೆ ಕಾ॥ ಶ್ಯಾಮಲಾ ಪೂಜಾರ್ ಕರೆ ನೀಡಿದ್ದಾರೆ.

(ವಿವರಗಳಿಗೆ 7ನೇ ಪುಟ ನೋಡಿ)

ಉಡುಪಿ ತಾಲ್ಲೂಕು ರೈತ ಸಮಾವೇಶ

ತಾಲ್ಲೋಕಿನ ಮೂಲೆ ಮೂಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದ ರೈತರು ಸೆಪ್ಟೆಂಬರ್ 24ರಂದು ಸಮಾವೇಶ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ಕಾ॥ ಡೆವಿಡ್ ಎ. ಕರ್ಕಡ ವಹಿಸಿದ್ದರು. ರೈತ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾ॥ ಅಬ್ರಹಾಂ ಕರ್ಕಡ ಇತ್ತೀಚೆಗೆ ನಡೆದ ಪಿಕೆಟಿಂಗ್‌ನಲ್ಲಿ ಅಸಂಖ್ಯಾತ ರೈತರು ಭಾಗವಹಿಸಿ ಯಶಸ್ವಿ ಗೊಳಿಸಿದ್ದನ್ನು ಪ್ರಶಂಸಿಸಿದರು. ಪ್ರತಿ ಗ್ರಾಮಗಳ ಸಂಘಟನೆ ಬಲಿಷ್ಟ ಕಟ್ಟಲು ಕರೆ ನೀಡಿದರು.ನ್ಯಾಯವಾದಿ ಶಿರ್ತಾಡಿ ವಿಲಿಯಂ ಪಿಂಟೊ, ರೈತ ನಾಯಕದ ಬೈಕಾಡಿ ಶೀನಪ್ಪ ಶೆಟ್ಟಿ ಲೋಕೇಶ ವಡಿವಾಳ, ನಗರ ಸಭಾ ಸದಸ್ಯ ಸಿ. ಕಾಳಪ್ಪ ಶೆಟ್ಟಿ, ಚರಡಪ್ಪ ಸನೀಲಾ, ಎಚ್. ವಿಠಲ, ಗೊಡ್ವಿನ್ ಫೆರ್ನಾಂಡಿಸ್ ಸಮಾವೇಶದಲ್ಲಿ ಮಾತನಾಡಿದರು. ಪ್ರಸಕ್ತ ವರ್ಷಕ್ಕೆ ಕಾ॥ ಡೇವಿಡ್ ಎ. ಕರ್ಕಡ (ಅಧ್ಯಕ್ಷ) ಶ್ಯಾಮಶೆಟ್ಟಿ, ಚರಡಪ್ಪ ಸನಿಲ್, ಶೀನಾಮಲ್ಯ, ಕಾಳಪ್ಪ ಶೆಟ್ಟಿ, ಗೋಡ್ವಿನ್ ಫರ್ನಾಂಡಿಸ್ ರವರುಗಳು (ಉಪಾಧ್ಯಕ್ಷರು) ರಾಮ ಕುಂದರ (ಕಾರ್ಯದರ್ಶಿ)ಗುಡ್ಡ ಪೂಜಾರಿ,ಕೃಷ್ಣ ಕೋಟೆಯನ್,ಗಂಗಾಧರ್ ಅಮಿನ್, (ಜೊತೆ ಕಾರ್ಯದರ್ಶಿಗಳು) ಎನ್. ಸಾಧು ಕೋಶಾಧಿಕಾರಿಯಾಗಿರುವ 31 ಜನರ ಸಮಿತಿ ರಚಿಸಲಾಯಿತು.

ಬರಗಾಲ ಪರಿಹಾರಕ್ಕೆ ಒತ್ತಾಯ

ಗುಲ್ಬರ್ಗ ಜಿಲ್ಲೆ ಎದುರಿಸುತ್ತಿರುವ ನಾನಾರೀತಿಯ ತೀವ್ರ ಬರಗಾಲ ಪರಿಸ್ಥಿತಿಯನ್ನು ನಿವಾರಿಸುವಲ್ಲಿ ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಪರಿಷತ್ ಪರಿಹಾರ ಕಾರ್ಯ ಕೈಗೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿವೆ ಎಂದು ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾ॥ ಎನ್. ಕೆ. ಉಪಾಧ್ಯಾಯ ಹಾಗೂ ಗುಲ್ಬರ್ಗ ಜಿಲ್ಲೆಯ ಕಾರ್ಯದರ್ಶಿ ಕಾ॥ ಕಲ್ಲಪ್ಪ ಕಿರಣಗಿ ಹೇಳಿಕೆಯಲ್ಲಿ ಖಂಡಿಸಿದ್ದಾರೆ.

ಜೇವರ್ಗಿ ಹಾಗೂ ಅಫಜಲ್ ಪುರ ತಾಲ್ಲೋಕಗಳಲ್ಲಿ ಅಲ್ಪ ಪ್ರಮಾಣದ ಪರಿಹಾರ ಕಾರ್ಯಆರಂಭಗೊಂಡಿದ್ದು, ಯಾದಗಿರಿ ತಾಲ್ಲೋಕಿಗೆ ಯಾವುದೇ ಅಭಾವ ಪರಿಹಾರ ದೊರೆಯದೇ ಕುಡಿಯುವ ನೀರಿಗೂ ಅಭಾವ ಉಂಟಾಗಿದೆ. ನೀರಿನ ಟ್ಯಾಂಕ್ ಕಟ್ಟಿ ನೀರೋದಗಿಸಲು ಪಕ್ಷ, ರೈತ ಸಂಘ ಹಾಗೂ ಜಿಲ್ಲಾ ಪರಿಷತ್ ಸದಸ್ಯ ಕಾ. ಮಾರುತಿ ಮಾನ್ಪಡೆ ಹಲವು ಬಾರಿ ಸಲಹೆ ಮಾಡಿದ್ದರೂ ಗಂಭೀರವಾಗಿ ಪರಿಗಣಿಸದೆ ಹೋದದ್ದರ ವಿರುದ್ಧ ಹೋರಾಟ ನಡೆಸಲು ಕರೆ ನೀಡಿದ್ದಾರೆ.

ಎಂ. ಎಸ್.ಕೆ. ಮಿಲ್‌ನಲ್ಲಿ ಮೂರನೇ ಪಾಳಿ ಕೆಲಸವನ್ನು ಏಕಾ ಏಕಿ ಮೇನೇಜ್‌ಮೆಂಟ್ ನಿಲ್ಲಿಸಿರುವುದನ್ನು ಖಂಡಿಸಿ ಕಾರ್ಮಿಕರು ಹೋರಾಟಕ್ಕೆ ಸಿದ್ಧರಾಗಲು ಕರೆ ನೀಡಿಲಾಗಿದೆ.

○

ಮೊಳಕಾಲ್ಮೂರು ಹಮಾಲಿ ಸಂಘ

ಚಿತ್ರದುರ್ಗಜಿಲ್ಲೆ ಮೊಳಕಾಲ್ಮರುವಿನಲ್ಲಿ ಸೆ.21 ರಂದುಮೊಳಕಾಲ್ಮೂರು ತಾಲ್ಲೋಕು ಹಮಾಲರ ಸಂಘವನ್ನು ಸಂಘದ ಪ್ರಧಾನ ಕಾರ್ಯದರ್ಶಿಕಾ.ಎ.ಜಿ ಗಂಗಾಧರರವರು ಉದ್ಘಾಟಿಸಿದರು. ಕಾ.ಎಸ್.ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಭೆಗೆ ಮೊದಲು ನಗರದ ಪ್ರಮುಖ ಬೀದಿಗಳಲ್ಲಿ ಘೋಷಣೆಯ ಫಲಕ ಹಿಡಿದು 100ಕ್ಕೂ ಹೆಚ್ಚು ಹಮಾಲಿಗಳು ಮೆರವಣಿಗೆ ನಡೆಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಭಾಷಣಕಾರರು ಹಮಾಲಿಗಳ ಬಲಿಷ್ಠ ಸಂಘಟನೆ ಕಟ್ಟಲು ಕರೆ ನೀಡಿದರು. ಎಸ್.ಎಫ್.ಐ.ನ ಕಾ.ಮಲಯಪ್ಪ, ಡಿ.ವೈ.ಎಫ್.ಐ.ನ ಕಾ.ಗೋವಿಂದರಾಜ್ ಶುಭಕೋರಿ ಮಾತನಾಡಿದರು.

ದಾಖಲೆ ನಿರ್ಮಿಸಿದ ದೆಹಲಿ ಚಲೋ

ಸೆ. 23ರಂದು ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ ಕಾರ್ಯಕ್ರಮ ಅಂಗವಾಗಿ ಎಸ್.ಎಫ್.ಐ, ಡಿ.ವೈ ಎಫ್. ನೀಡಿದ 1 ಲಕ್ಷ ವಿದ್ಯಾರ್ಥಿ ಯುವಜನರ 'ದೆಹಲಿ ಚಲೋ' ಕಾರ್ಯಕ್ರಮ ಅತ್ಯಂತ ಉತ್ಸಾಹ ದಾಯಕವಾಗಿ ನಿರೀಕ್ಷೆ ಮೀರಿ 1 ಲಕ್ಷದ 20 ಸಾವಿರ ಮಂದಿ ಭಾಗವಹಿಸಿ ದಾಖಲೆ ನಿರ್ಮಿಸಲಾಗಿದೆ. (1981 ರ 60 ಸಾವಿರ ದಾಖಲೆಯನ್ನು ದಾಟಿದೆ) ಕೇರಳ–ಆಂಧ್ರ, ಕರ್ನಾಟಕ ರಾಜ್ಯಗಳಿಂದ ಕಡಿಮೆ ಸಂಖ್ಯೆಯ ನಿರೀಕ್ಷೆ ಇದ್ದರೂ ಕರ್ನಾಟಕದ 100 ಮಂದಿ ಎಸ್.ಎಸ್.ಐ, ಡಿ.ವೈ.ಎಫ್.ಐ. ಕಾರ್ಯಕರ್ತರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ರೈತರ ಪಿಕೆಟಿಂಗ್ ಚಳುವಳಿ

ಚಿತ್ರದುರ್ಗ ಜಿಲ್ಲೆ

ಮೊಳಕಾಲ್ಮರು ತಾಲ್ಲೋಕು ರಾಂಪುರದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಕರೆಯಂತೆ ಸೆ. 10 ರಂದು ಸುಮಾರು 1 ಸಾವಿರ ಮಂದಿ ರೈತ ವಿದ್ಯಾರ್ಥಿ ಯುವಜನರು ನಾಡ ಕಛೇರಿಯನ್ನು ಹಾಗೂ ರಸ್ತೆ ರೋಖೋ ಚಳುವಳಿ ನಡೆಸಿದರು. ಸುಮಾರು 300 ಜನರನ್ನು ಪೋಲೀಸರು ಬಂಧಿಸಿದರು. ಕಾ॥ಎ.ಜಿ.ಗಂಗಾಧರ, ಅಣ್ಣಪ್ಪ ಗೋವಿಂದರಾಜ್, ಡಿ.ಎಂ.ಮಲಿಯಪ್ಪ ಈ ಚಳುವಳಿಯ ನೇತೃತ್ವ ವಹಿಸಿದ್ದರು ಎಸ್.ಎಫ್.ಐ, ಡಿ.ವೈ.ಎಫ್.ಐ. ಸಂಘಟನೆಗಳು ಹೆಚ್ಚು ಸಕ್ರೀಯವಾಗಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಲು ಶ್ರಮಿಸಿದವು.

ರಾಯಚೂರು ಜಿಲ್ಲೆ

ಜಿಲ್ಲೆಯ ಮಾನ್ವ ತಾಲ್ಲೋಕಿನಲ್ಲಿ ಸೆ.7 ರಿಂದ 11ರ ವರೆವಿಗೆ ರೈತರು ತಹಶೀಲ್ದಾರ್, ಬಿ.ಡಿ.ಓ. ನಾಡ ಕಛೇರಿ, ತುಂಗಭದ್ರ ಗ್ರಾಮೀಣ ಬ್ಯಾಂಕ್, ಉಪ ಖಜಾನೆ ಮುಂತಾದ ಆಫೀಸ್ ಮತ್ತು ಕಛೇರಿಗಳನ್ನು ಪಿಕೆಟಿಂಗ್ ನಡೆಸಿ ಸುಮಾರು 700ಮಂದಿ ರೈತರು ಬಂಧನಕ್ಕೊಳಗಾಗಿದ್ದಾರೆ. ಸೆ 1ರಿಂದ4 ರವರೆವಿಗೂ ಮಾಡಗಿರಿ, ಗೋರ್ಖಲ್, ಮಂಡಲ ಪಂಚಾಯ್ತಿ ವ್ಯಾಪ್ತಿಯ ಸುಮಾರು 16 ಗ್ರಾಮಗಳಲ್ಲಿ 40ರೈತ ಕಾರ್ಯಕರ್ತರು ಕಾಲ್ನಡೆ ಜಾಥಾ ನಡೆಸಿ ಪಿಕೆಟಿಂಗ್ ಪ್ರಚಾರಕಾರ್ಯ ನಡೆಸಿದರು. ಪಿಕೆಟಿಂಗ್ ಚಳುವಳಿ ನಾಯಕತ್ವವನ್ನು ಕಾ.ವೀರೆದಗೌಡ, ಅನುರಪ್ಪ, ಬಸವರಾಜಪ್ಪ, ಡಾ.ಬಾಲಚಂದ್ರ, ವೆಂಕಟೇಶ್, ಡಾ.ಗುಡ್ಡನಾಯ್ಕ, ವೀರಯ್ಯಶೆಟ್ಟಿ, ರಾಮಣ್ಣ ಕೂಡಳಿ ಮುಂತಾದವರುಗಳು ವಹಿಸಿದ್ದರು.

ಡಿ. ವೈ. ಎಫ್. ಐ. ತಾಲ್ಲೋಕು ಸಮ್ಮೇಳನ

ಡಿ.ವೈ.ಎಫ್.ಐ. ತಾಲ್ಲೋಕು ಸಮ್ಮೇಳನ ಮಂಗಳೂರಿನ ಸರ್ಕಾರಿ ಭವನದಲ್ಲಿ ಕಾ. ಜಿ.ಸದಾಶಿವ ಶೆಟ್ಟಿಯವರ ಧ್ವಜಾರೋಹಣ ಕಾ. ಬಿ.ಎಂ. ಮಾದವ ರವರ ಉದ್ಘಾಟನೆಯೊಂದಿಗೆ ಮಂಗಳೂರಿನಲ್ಲಿ ಆರಂಭಗೊಂಡಿತು. ಕಾ. ನಾಗೇಶ ಕುಮಾರ್ ಅತಿಥಿಗಳಾಗಿ ಮಾತನಾಡಿದರು. ಕಾ. ಶಿವಾನಂದ ಕೋಡಿ ಚಟುವಟಿಕೆ ವರದಿ ಮಂಡಿಸಿದರು. 2060 ಸದಸ್ಯರನ್ನು ಪ್ರತಿ ನಿಧಿಸಿ 8 ಪ್ರತಿನಿಧಿಗಳು ಭಾಗವಹಿಸಿದರು. ಕೆಲ ತಿದ್ದುಪಡಿಯೊಂದಿಗೆ ವರದಿ ಅಂಗೀಕರಿಸಲಾಯಿತು.

ಸರಕಾರಿ ಆಸ್ಪತ್ರೆಗೆ ಸಿಬ್ಬಂದಿ ನೇಮಕ, ಬಡವರ ಮನೆಗಳಿಗೆ ನಂಬ್ರ ಹಾಕಿ ರೇಶನ್ ಕಾರ್ಡ್ ನೀಡಿ, ಮತದಾನದ ಹಕ್ಕು ನೀಡುವುದು, ಮನೆಗಳ ಮೇಲೆ 20ರೂ. ನಿಂದ 150 ರೂವರೆಗೆ ಏರಿಸಿರುವ ಹೊಸ ತೆರಿಗೆ ಕೈಬಿಡುವುದು, ಮಂಗಳೂರು ವಿ.ವಿ. ಕಾಲೇಜುಗಳಿಗೆ ನೀಡುವ ಸ್ವಾಯತ್ತತೆಯ ವಾಪಸ್ಸಾತಿ ಮುಂತಾದ ಬೇಡಿಕೆಗಳ ನಿರ್ಣಯಗಳನ್ನು ಅಂಗೀಕರಿಸಲಾಯಿತು. ತಾಲ್ಲೋಕು ಸಮಿತಿಗೆ ಕಾ. ಜಿ. ಸದಾಶಿವಶೆಟ್ಟಿ (ಅಧ್ಯಕ್ಷ) ಯು.ಬಿ. ನಾರಾಯಣ, ಸುನೀಲ್ ನಟೇಕರ್ (ಉಪಾಧ್ಯಕ್ಷರು) ರಮೇಶ್ ಉಳ್ಳಾಲ್ (ಕಾರ್ಯದರ್ಶಿ) ಚಂದ್ರಹಾಸ ಶಿವಾನಂದಕೋಡಿ (ಜೊತೆ ಕಾರ್ಯದರ್ಶಿಗಳು) ಕೃಷ್ಣಪ್ಪ ಕೋಶಾಧಿಕಾರಿಯಾಗಿರುವ 28 ಮಂದಿಯ ತಾಲ್ಲೋಕು ಸಮಿತಿಯನ್ನು ಆಯ್ಕೆಮಾಡಲಾಯಿತು.

ಜಲ ಮಂಡಳಿ ನೌಕರ ಹೋರಾಟಕ್ಕೆ ಜಯ

ಕೆ. ಜಿ. ಎಫ್.

ಬೇತಮಂಗಲದ ಜಲ ಮಂಡಳಿಯ ನೌಕರರು ಸೆ. 19 ರಂದು ತಮ್ಮ ಹೋರಾಟದ ವಿಜಯೋತ್ಸವ ಆಚರಿಸಿದರು.ದಿನಗೂಲಿಕೆಲಸಗಾರರ ಖಾಯಂ, ಖಾಯಂ ನೌಕರರ ಸಂಬಳ ಹೆಚ್ಚಳಕ್ಕಾಗಿ ರಾಜ್ಯಾದ್ಯಂತ ಚಳವಳಿ ಹೂಡಿದ್ದರು. ರಾಜ್ಯ ಜಲ ಮಂಡಳಿ ನೌಕರ ಸಂಘದ ಅಧ್ಯಕ್ಷ ಕಾ.ವಿ.ಎನ್.ಹಳಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿ.ಪಿ.ಐ.(ಎಂ) ಶಾಸಕರಾದ ಕಾ ಆರ್.ವೆಂಕಟರಾಮಯ್ಯ ಟಿ.ಎಸ್.ಮಣಿ, ಜನತಾ ಪಕ್ಷದ ಶಾಸಕ ಚಿನ್ನಪ್ಪ, ಸಿ ಐ.ಟಿ.ಯು. ಮುಖಂಡ ಕಾ.ಜಯರಾಂ ಮಾತನಾಡಿದರು. ಸಮಾನಕೆಲಸಕ್ಕೆ, ಸಮಾನವೇತನ, ಎಲ್ಲಾ ನೌಕರರ ಖಾಯಂ ಅಗತ್ಯಸೌಲಭ್ಯಕ್ಕಾಗಿ ಐಕ್ಯ ಹೋರಾಟವನ್ನು ನಡೆಸಲು ಸಂಘಟನೆಯನ್ನು ಇನ್ನು ವ್ಯಾಪಕವಾಗಿ ಹಾಗೂ ಬಲಿಷ್ಠವಾಗಿ ಕಟ್ಟಿ ಹೋರಾಟ ನಡೆಸಲು ಎಲ್ಲಾ ಭಾಷಣಕಾರರು ಕರೆ ನೀಡಿದರು. ನೌಕರ ಸಂಘದ ಕಾರ್ಯದರ್ಶಿ ಕಾ.ಶ್ರೀನಿವಾಸ ಧನ್ಯವಾದ ಅರ್ಪಿಸಿದರು.

'ದೂರದರ್ಶನ' ಎಂಬ ಆಳುವ ವರ್ಗದ ಕೈಗೊಂಬೆ

ದೂರದರ್ಶನಕ್ಕೆ "ಸುದ್ದಿ" ಎಂದರೆ ಬಹುಮಟ್ಟಿಗೆ ಪ್ರಧಾನಿ ಮತ್ತು ಅವರ ಸಚಿವ ಸಹೋದ್ಯೋಗಿಗಳು ಭಾಗವಹಿಸುವ ಸಭೆ, ಸಮಾರಂಭಗಳು, ಮಂತ್ರಿಗಳ ಬಿಂಬವನ್ನು ಜನರ ಮನಸ್ಸಿನಲ್ಲಿ ಸ್ಥಾಯೀಗೊಳಿಸುವುದು.

ಇದರಿಂದ ಆಳುವ ಪಕ್ಷಕ್ಕೆ ಅನುಕೂಲವಾಗುವುದೆನ್ನುವ ಭ್ರಮೆ ಆಡಳಿತ ಪಕ್ಷದ ರಾಜಕಾರಣಿಗಳಿಗೂ ಇದೆ, ಮಂದಿಮಾಗದರಾದ ಅಧಿಕಾರಿಗಳಿಗೂ ಇದೆ. ಈ ಎರಡು ವರ್ಗಗಳವರು ಅನುಭವದಿಂದ ಪಾಠ ಕಲಿಯುವವರಲ್ಲವಾದ್ದರಿಂದ ದೂರದರ್ಶನದ ಕಾರ್ಯವಿಧಾನ ಬದಲಾಗಿಲ್ಲ.

ಇದುವರೆಗೆ ಜನಸಾಮಾನ್ಯರು ಗೊಣಗುತ್ತಿದ್ದರು. ಕೆಲವು ಪ್ರತಿ ಪಕ್ಷಗಳುಪ್ರತಿಭಟಿಸುತ್ತಲೂ ಇದ್ದವು.ಆದರೆ ಪ್ರತಿ ಪಕ್ಷದ ಸರಕಾರ ಒಂದು ದೂರದರ್ಶನದೊಡನೆ ಅಸಹಕಾರವನ್ನು ಇದುವರೆಗೆ ಪ್ರಕಟಿಸಿರಲಿಲ್ಲ,ಈಗ ಪ್ರಕಟಿಸಿದೆ.

ಪಶ್ಚಿಮ ಬಂಗಾಳದ ವಾಮರಂಗದ ಸರಕಾರ ದೂರದರ್ಶನ ಮತ್ತು ಆಕಾಶವಾಣಿಯೊಂದಿಗೆ ಅಸಹಕಾರ ಘೋಷಿಸಿದೆ.ಆಕಾಶವಾಣಿಮತ್ತು ದೂರದರ್ಶನ ಸಲಹಾ ಮಂಡಳಿಗಳಲ್ಲಿದ್ದ ತನ್ನ ಪ್ರತಿನಿಧಿಗಳನ್ನು ಪಶ್ಚಿಮ ಬಂಗಾಳ ಸರ್ಕಾರ ವಾಪಸ್ ಕರೆಸಿಕೊಂಡಿದೆ.

ಪಶ್ಚಿಮ ಬಂಗಾಳ ಸರ್ಕಾರದ ದೂರೆಂದರೆ ಆಕಾಶವಾಣಿ ಮತ್ತು ದೂರದರ್ಶನ ಸುದ್ದಿಯನ್ನು ವಿರೂಪಗೊಳಿಸುತ್ತವೆ ಮತ್ತು ಉದ್ದೇಶಪೂರ್ವವಾಗಿ ಸುದ್ದಿಯನ್ನು ಜನರಿಂದ ಮುಚ್ಚಿಡುತ್ತವೆ ಎನ್ನುವುದು.

ಬಸು ಸರ್ಕಾರದ ಈಗಿನ ನಿರ್ಧಾರಕ್ಕೆ ತತ್‌ಕ್ಷಣದ ಕಾರಣ ಭಾರತದ ವಿದ್ಯಾರ್ಥಿಫೆಡರೇಷನ್ ಈಚೆಗೆ ಕಲಕತ್ತೆಯಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರಗೋಷ್ಠಿಯನ್ನು ಕೇಂದ್ರದ ಸರ್ಕಾರ ಸುದ್ದಿ ಮಾಧ್ಯಮಗಳು ನಿರ್ಲಕ್ಷಿಸಿದ್ದು.

ಗುರಿಯಾಗಿದೆ.ನಿಜವಾದ ಸುದ್ದಿಯನ್ನು ಜನರಿಗೆ ತಿಳಿಸುವುದು ಗುರಿಯಾಗಿದ್ದರೆ ಯುವ ಕಾಂಗ್ರೆ ಸಭೆಯಲ್ಲಿ ಮತ್ತು ವಿದ್ಯಾರ್ಥಿ ಫೆಡರೇಷನ್ ಸಭೆಯಲ್ಲಿ ಯಾವುದಕ್ಕೆ ಮಹತ್ವ ನೀಡಬೇಕೆಂದು ನಿರ್ಧರಿಸಲು ಹೆಚ್ಚಿಗೆ ಬುದ್ಧಿವಂತಿಕೆ ಏನೂ ಬೇಕಿಲ್ಲ. ಇಲ್ಲಿ ಯಾರು ವಿಚಾರ ಗೋಷ್ಠಿಯನ್ನು ಏರ್ಪಡಿಸಿದ್ದರೆಂಬುದು ಅಪ್ರಕೃತ.ಯಾವುದು ಜನರ ಗಮನವನ್ನು ಹೆಚ್ಚು ಸೆಳೆಯಿತು, ಯಾವುದರ ಬಗ್ಗೆ ಪತ್ರಿಕೆಗಳ ಮೂಲಕವಾಗಲೀ,ದೂರದರ್ಶನದ ಮೂಲಕವಾಗಲೀ,

ಸೆಪ್ಟೆಂಬರ್ 12ರಂದಿನ ಕಲ್ಕತ್ತೆಯ ಪತ್ರಿಕೆಗಳನ್ನು ನೋಡಿದ ಮೇಲೆ ದೂರದರ್ಶನದ ವ್ಯವಸ್ಥಾಪಕರು ನಾಚಿಕೆಯಿಂದ ತಲೆ ತಗ್ಗಿಸಬೇಕು. ಅಂದಿನ ವಿಚಾರ ಗೋಷ್ಠಿಯ ವರದಿ ಪುಟಗಟ್ಟಲೆ ಪ್ರಕಟವಾಯಿತು.

ತಾನು ಸರಕಾರದ ಮಾಧ್ಯಮವಾದ್ದರಿಂದ ಖಾಸಗೀ ಕ್ಷೇತ್ರದ ಪತ್ರಿಕೆಗಳೊಂದಿಗೆ ತನ್ನನ್ನು ಹೋಲಿಸಬಾರದೆಂದು ದೂರದರ್ಶನ ಹೇಳುವಂತಿಲ್ಲ. ಪತ್ರಿಕೆಗಳಷ್ಟು ವ್ಯಾಪಕವಾಗಿ ಇಪ್ಪತ್ತು ನಿಮಿಷದ ಅವಧಿಯಲ್ಲಿ ಸಮಗ್ರವಾಗಿ

"ದೂರದರ್ಶನ" ಎಂಬ ಪ್ರಬಲ ಮಾಧ್ಯಮ ಮೂಲೆ ಮೂಲೆಯಹಳ್ಳಿಗಳಿಗೂ ತಲುಪುವ "ಆಕಾಶವಾಣಿ" ಎಡಚಳವಳಿಯ ಧ್ವನಿಯನ್ನು ಅದುಮಿಹಿಡಿಯಲು ಬಹಳ ಪ್ರಯಾಸ ಪಡುತ್ತಿವೆ.

ಇನ್ನೂ ಪ್ರತಿಕೆಗಳಲ್ಲಿ ಹಲವಕ್ಕೆ ಎಡ ಚಳುವಳಿ, ಕಮ್ಯುನಿಸ್ಟ್ ಪಕ್ಷಗಳೆಂದರೆ ಸಾಕು ಕೆಂಡಾಮಂಡಲ ಕೋಪ. ಇತ್ತೀಚೆಗೆ ಈ ಸುದ್ದಿ ಮಾಧ್ಯಮಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನೇತೃತ್ವದ ಸಂಘಟನೆಗಳು ಹಾಗೂ ಸರಕಾರಗಳ ಬಗ್ಗೆ ನಡೆಸುತ್ತಿರುವ ಮೌನ ಪಿತೂರಿಯ, ಕೆಲವು ದೃಶ್ಯಗಳು ಇಲ್ಲಿವೆ. ಹೆಸರಾಂತ ಪತ್ರಿಕಾಕರ್ತರಾದ ಸಿ.ವಿ.ರಾಜಗೋಪಾಲ್ 'ಕನ್ನಡಪ್ರಭ'ದ ತಮ್ಮ ಲೇಖನದಲ್ಲಿ ದೂರದರ್ಶನದ ಸುದ್ದಿ ವಂಚನೆಯನ್ನು ಬಯಲಿಗೆಳೆದಿದ್ದಾರೆ.

ಪಕ್ಷಪಾತ

ವಿಚಾರ ಗೋಷ್ಠಿಯಲ್ಲಿ ಹದಿನಾಲ್ಕು ಸಾವಿರ ಮಂದಿ ಭಾಗವಹಿಸಿದ್ದರು. ಆನಂದ ಶರ್ಮಾ ಅವರು ಒಂದು ಸಣ್ಣ ಕೊಠಡಿಯಲ್ಲಿ ಏರ್ಪಡಿಸುವ ಯುವ ಕಾಂಗ್ರೆಸ ಸಭೆಗಳೂ ದೂರದರ್ಶನಕ್ಕೆ ಸುದ್ದಿಯಾಗುತ್ತದೆ.

ಯುವ ಕಾಂಗ್ರೆಸಭೆಗೂ ವಿದ್ಯಾರ್ಥಿ ಫೆಡರೇಷನ್ ಸಭೆಗೂ ಒಂದು ವ್ಯತ್ಯಾಸವಿದೆ. ದೂರದರ್ಶನದ ಆಡಳಿತ ವರ್ಗಕ್ಕೆ ಅದೇ "ಮಹತ್ತರ" ವ್ಯತ್ಯಾಸ. ಮೊದಲಿನ ಸಭೆಯನ್ನು ಆಡಳಿತ ಪಕ್ಷದ ಅಂಗ ಏರ್ಪಡಿಸುತ್ತದೆ, ಎರಡನೇಯ ಸಭೆಯನ್ನು ಪ್ರತಿಪಕ್ಷದ ನಾಯಕತ್ವದ ಸಂಘಟನೆ ಏರ್ಪಡಿಸುತ್ತದೆ.

ಆಡಳಿತ ಪಕ್ಷದ ಪರ ಪ್ರಚಾರ ದೂರದರ್ಶನ ಮತ್ತು ಆಕಾಶವಾಣಿಯ ಹೆಚ್ಚುಗಾರಿಕೆ ... ಹೆಚ್ಚುತಿಳಿಯಲು ಜನ ಕುತೂಹಲದಿಂದಿದ್ದರು.ಎನ್ನುವುದು ಮುಖ್ಯವಾಗಬೇಕಾಗಿತ್ತು. ಯುವ ಕಾಂಗ್ರೆಸವರೇ ಮಹತ್ತರ ಸಭೆಗಳನ್ನು ನಡೆಸಿದರೆ, ಜನರ ಕುತೂಹಲ ಕೆರಳಿಸುವಂಥ ಚರ್ಚೆ ನಡೆಸಿದರೆ ದೂರದರ್ಶನ ಕೂಡ ಪ್ರಚಾರ ನೀಡುವುದರಲ್ಲಿ ತಪ್ಪೇನಿಲ್ಲ. ಆದರೆ ಪಕ್ಷಪಾತ ಏಕೆ ಮಾಡಬೇಕು ?

ಸುದ್ದಿ ಪ್ರಸಾರ ಮಾಡುವುದು ದೂರದರ್ಶನಕ್ಕೆ ಸಾಧ್ಯವಿಲ್ಲ. ಅದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ತಾನು ಪ್ರಸಾರ ಮಾಡುವುದನ್ನು ದೂರದರ್ಶನ ಎಲ್ಲಿಯವರೆಗೆ "ಸುದ್ದಿ" ಎಂದು ಕರೆದುಕೊಳ್ಳುತ್ತದೆ ಅಲ್ಲಿಯವರೆಗೆ ಪ್ರಸಾರ "ಸುದ್ದಿ" ಆಗಬೇಕು. ತನಗೆ ಬೇಕಾದ್ದಕ್ಕೆ ಪ್ರಸಾರ ನೀಡಿ, ಬೇಡವಾದ್ದನ್ನು ಮುಚ್ಚಿಡುವುದು ಪ್ರಚಾರವಾಗುತ್ತದೆ. ಸುದ್ದಿಯಾಗುವುದಿಲ್ಲ. ಅದು ಸಮುದಾಯದ ಪ್ರಶ್ನೆ ಅಲ್ಲ, ಆಯ್ಕೆಯ ಪ್ರಶ್ನೆ. ಆಗ ಇಪ್ಪತ್ತು ನಿಮಿಷಗಳ ಸುದ್ದಿ ಎಂದು ಹೇಳಿಕೊಳ್ಳಲು ದೂರದರ್ಶನಕ್ಕೆ ಹಕ್ಕಿಲ್ಲ.

ಸುದ್ದಿ ಯೋಗ್ಯ

ಕಲಕತ್ತೆಯ ವಿದ್ಯಾರ್ಥಿ ಫೆಡರೇಶನ್ ವಿಚಾರ ಗೋಷ್ಠಿಯಲ್ಲಿ ಮಾಜಿ ರಕ್ಷಣಾ ಮಂತ್ರಿ ವಿ.ಪಿ. ಸಿಂಗ್ ಅವರು ಭಾಗವಹಿಸಿದ್ದರು. ಆದ್ದರಿಂದ ಮುಚ್ಚಿಡಲಾಯಿತು. ಸಿಂಗ್ ಅವರು ಕೆಲವು ಕಾಂಗ್ರೆಸವರಿಗಾದರೂ ಸಿಂಹ ಸ್ವಪ್ನವಿರಬಹುದು. ಆದರೆ ದೂರದರ್ಶನ ಇರುವುದು ಆ ಕೆಲ ಮಂದಿ ಕಾಂಗ್ರೆಸವರಿಗಾಗಿ ಅಲ್ಲ. ಹದಿನಾಲ್ಕು ಸಾವಿರದಷ್ಟು ಅಧಿಕ ಸಂಖ್ಯೆ ಜನ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದರೆಂಬುದೇ ಸುದ್ದಿಗೆ ಯೋಗ್ಯವಾಗಿತ್ತು.

ದೂರದರ್ಶನವನ್ನು "ಸುದ್ದಿ ಮಾಧ್ಯಮ" ಎಂದು ಹೇಳುವುದು ಹೇಗೆ ?

ಕೇರಳದಲ್ಲಿ

ದೂರದರ್ಶನದ ಪೂರ್ವಾಗ್ರಹಕ್ಕೆ ಮತ್ತೊಂದು ನಿದರ್ಶನ ಸ್ವಾತಂತ್ರ್ಯ ದಿನದಂದು ಕೇರಳದಲ್ಲಿ ಕಂಡ ಅದ್ಭುತ ದೃಶ್ಯ ಒಂದನ್ನು ದೂರದರ್ಶನದ ವೀಕ್ಷಕರಿಂದ ಮರೆಮಾಚಿದ್ದು.

ಸ್ವಾತಂತ್ರ್ಯ ದಿನವನ್ನು ಕೇರಳದಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. ತಿರುವನಂತಪುರದಿಂದ ಕಾಸರಗೋಡಿನವರೆಗೆ ಅಂದರೆ ಕೇರಳದ ತುದಿಯಿಂದ ಮತ್ತೊಂದು ತುದಿಯವರೆಗೆ ಸುಮಾರು 700 ಕಿಲೋಮೀಟರ್

[5ನೇ ಪುಟ ನೋಡಿ]

ದೂರದರ್ಶನಕ್ಕೆ "ಸುದ್ದಿ" ಎಂದರೆ ಬಹುಮಟ್ಟಿಗೆ ಪ್ರಧಾನಿ ಮತ್ತು ಅವರ ಸಚಿವ ಸಹೋದ್ಯೋಗಿಗಳು ಭಾಗವಹಿಸುವ ಸಭೆ, ಸಮಾರಂಭಗಳು, ಮಂತ್ರಿಗಳ ಬಿಂಬವನ್ನು ಜನರ ಮನಸ್ಸಿನಲ್ಲಿ ಸ್ಥಾಯೀಗೊಳಿಸುವುದು.

ಆನಂದಶರ್ಮಾ ಅವರು ಒಂದು ಸಣ್ಣ ಕೊಠಡಿಯಲ್ಲಿ ಏರ್ಪಡಿಸುವ ಯುವ ಕಾಂಗ್ರೆಸ ಸಭೆಗಳೂ ದೂರದರ್ಶನಕ್ಕೆ ಸುದ್ದಿಯಾಗುತ್ತದೆ.

ದೂರದರ್ಶನದ ಪೂರ್ವಾಗ್ರಹಕ್ಕೆ ಮತ್ತೊಂದು ನಿದರ್ಶನಸ್ವಾತಂತ್ರ್ಯ ದಿನದಂದು ಕೇರಳದಲ್ಲಿ ಕಂಡ ಅದ್ಭುತ ದೃಶ್ಯ ಒಂದನ್ನು ದೂರದರ್ಶನದ ವೀಕ್ಷಕರಿಂದ ಮರೆಮಾಚಿದ್ದು.

ಸುದ್ದಿ ಮಾಧ್ಯಮಗಳ ಕುರುಡುತನ

ಲಕ್ಷಾಂತರ ದುಡಿಮೆಗಾರರು ಜೈಲಿಗೆ ಹೋದ,ಮಿಲಿಯಾಂತರ ಜನರು ಸಭೆ, ಮೆರವಣಿಗೆಗಳಲ್ಲಿ ಪಾಲ್ಗೊಂಡ ಒಂದು ಮಹತ್ವದ ಚಳವಳಿ ಗಳಿಸ ಬೇಕಾದ ಪ್ರಚಾರವನ್ನು ಗಮನದಲ್ಲಿಟ್ಟುಕೊಂಡರೆ ಮೇಲಿನ ಶೀರ್ಷಿಕೆಯಷ್ಟೆ ಅದಕ್ಕೆ ಸರಿಹೊಂದುವಂತಹದ್ದಾಗಿದೆ.

ಅಲ್ಲಲ್ಲಿ ಪ್ರಾದೇಶಿಕವಾಗಿ, ರಾಜ್ಯವಾರಾಗಿ, ಅದೂ ಕೂಡ ಹೆಚ್ಚಾಗಿ ಶ್ರೀಮಂತ ರೈತರ ನೇತೃತ್ವದಲ್ಲಿ ಆಗಾಗ ನಡೆಯುವ ರೈತರ ಚಳುವಳಿಯಂತಲ್ಲದೆ ತೆಲಂಗಾಣದಂತಹ ಕ್ರಾಂತಿಕಾರಿ ಹೋರಾಟ ಪರಂಪರೆಯುಳ್ಳ ಅಖಿಲ ಭಾರತ ಕಿಸಾನ್ ಸಭಾವು ಅಖಿಲ ಭಾರತ ಕೃಷಿಕೂಲಿಗಾರರ ಸಂಘಟನೆಯ ಸಹ ಯೋಗದಲ್ಲಿ ಸೆ. 7 ರಿಂದ 13ರ ವರೆಗೆ ದೇಶವ್ಯಾಪಿ ಸರಕಾರಿ ಕಛೇರಿಗಳ ಪಿಕೆಟಿಂಗ್ ಚಳವಳಿ ಹಮ್ಮಿಕೊಂಡಿತ್ತು. ರೈತ ಕೃಷಿ ಕೂಲಿಗಾರರ ಬೇಡಿಕೆಗಳು ಮಾತ್ರವಲ್ಲದೆ ಎಲ್ಲಾ ಜನ ವಿಭಾಗಗಳನ್ನೂ ಬಾಧಿಸುವ ಬೆಲೆಯೇರಿಕೆ, ಬರಗಾಲದಂತಹ ಪ್ರಮುಖ ಸಮಸ್ಯೆಗಳತ್ತ ಗಮನ ಸೆಳೆದು ಪರಿಹಾರಕ್ಕೆ ಒತ್ತಾಯಿಸುವುದು ಈ ಐತಿಹಾಸಿಕ ಚಳವಳಿಯ ಗುರಿಯಾಗಿತ್ತು.

ರೇಡಿಯೊ, ಟಿವಿಗಳು ಹೇಗೂ ಸರಕಾರಿ ಮುಖವಾಣಿಗಳು ಪ್ರತಿಪಕ್ಷಗಳ, ಅದರಲ್ಲೂ ಎಡ ಪಂಥೀಯರ ಕಾರ್ಯಕ್ರಮ, ಚಳವಳಿಗೆ ಇವುಗಳಲ್ಲಿ ಪ್ರಚಾರ ದೊರೆಯುತ್ತದೆಂದು ನಿರೀಕ್ಷಿಸುವುದು 'ಮರಳುಗಾಡಿನಲ್ಲಿ ಓಯಸಿಸ್‌ನಂತೆ' ಆದರೆ ಪಕ್ಷಾತೀತ ಸುದ್ದಿ ಮೌಲ್ಯಮುಂತಾದ 'ಮೌಲ್ಯ'ಗಳನ್ನು ಹೇಳುವ ಪತ್ರಿಕೆಗಳಲ್ಲಿ ಪ್ರಚಾರ ದೊರೆಯುತ್ತದೆಂಬ ಅಭಿಪ್ರಾಯ ಸಾಮಾನ್ಯವಾಗಿರುತ್ತದೆ. ಪ್ರಸಕ್ತ ರೈತ ಕೃಷಿ ಕೂಲಿಗಾರರ ವ್ಯಾಪಕ ಹೋರಾಟದ ಹಿನ್ನೆಲೆಯಲ್ಲಿ ಈ ಅಭಿಪ್ರಾಯವೂ ತಿರುವು ಮುರುವಾಗಿದೆ. ಪತ್ರಿಕೆಗಳೆಲ್ಲವನ್ನೂ ತಿರುವಿ ಹಾಕಿ ನಾವು ಪರಿಶೀಲಿಸಿದರೂ ಎಲ್ಲೋ ಒಂದು ಮೂಲೆಯಲ್ಲಿ ಸಣ್ಣ ಸಣ್ಣ ಸುದ್ದಿ ಪ್ರಕಟವಾಗಿರುವುದು ಬಿಟ್ಟರೆ ಅದೊಂದು ರಾಜಕೀಯ ಚಳವಳಿ ಎಂದು ಅನಿಸುವುದೇಇಲ್ಲ! ಎಲ್ಲಿವರೆಗೆ ಈ ಪರಿಸ್ಥಿತಿಯೆಂದರೆ ಬೆಂಗಳೂರಿನಲ್ಲಿ ಕಾರ್ಯಕ್ರಮ ನಡೆದ ವಿಷಯ 'ಐಕ್ಯರಂಗ' ದಿಂದಷ್ಟೆ ತಿಳಿಯಬೇಕಾಯಿತು.

'ಮುಂಗಾರು'ನಂತಹ ಪತ್ರಿಕೆಯಲ್ಲಿ ವಿವರವಾದ ಲೇಖನ ಸೇರಿದಂತೆ ಕೆಲವು

ಪತ್ರಿಕೆಗಳಲ್ಲಿ ಪ್ರಚಾರ ಸಿಗಲಿಲ್ಲವೆಂದು ಚಳವಳಿಯೇನೂ ಸ್ಥಗಿತವಾಗುವುದಿಲ್ಲವಲ್ಲ.

ಸ್ಥಳೀಯ ಸಣ್ಣ ಮಧ್ಯಮ ಪತ್ರಿಕೆಗಳಲ್ಲಿ ಅಲ್ಪ ಸ್ವಲ್ಪ ಪ್ರಚಾರ ದೊರೆತಿದೆ. ಕೆಲವೆಡೆ ತಮ್ಮ ಸಮೀಪದಲ್ಲಿ ನಡೆದ ಹೋರಾಟಕ್ಕೆ ಪ್ರಚಾರ ನೀಡದಿರುವ ತಂತ್ರವೂ ನಡೆದಿದೆ. ಉದಾಹರಣೆಗೆ ದ.ಕ.ಜಿಲ್ಲೆಯ ಉಡುಪಿಯಲ್ಲಿ ಪಿಕೆಟಿಂಗ್ ಬಂಧನ ನಡೆದರೂ ಅಲ್ಲೇ ಸಮೀಪದಲ್ಲಿ ಪ್ರಕಟವಾಗುವ ಪ್ರಮುಖ ದೈನಿಕವೊಂದರಲ್ಲಿ ಈ ಸುದ್ದಿ ಬೆಳಕು ಕಾಣಲೇ ಇಲ್ಲ!

ದೇಶದ ಬಹುತೇಕ ಎಲ್ಲಾ ಪತ್ರಿಕೆಗಳೂ ಪಿ.ಟಿ.ಐ, ಯು.ಎನ್.ಐ. ನಂತಹ ಸುದ್ದಿ ಸಮಾಚಾರ ಸಂಸ್ಥೆಗಳೂ ಬಂಡವಾಳಶಾಹಿಗಳ ಹಿಡಿತದಲ್ಲಿದೆಯೆನ್ನುವುದನ್ನು ಗಮನಿಸಿದಾಗ ಈ ಹೋರಾಟಗಳ ಸುದ್ದಿಗಳುಪ್ರಕಟವಾಗದಿರುವ ಹಿಂದಿನ 'ವರ್ಗಗುಣ'ದ ಅರಿವಾಗುತ್ತದೆ.

ಸರಕಾರ ಉರುಳಿಸುವ ಬೂರ್ಜ್ವಾ ಪ್ರತಿಪಕ್ಷಗಳ ಪಿತೂರಿಗಳಿಗೆ [ರಾಷ್ಟ್ರಪತಿ ಚುನಾವಣೆ ಜೈಲ್‌ಸಿಂಗ್ ಪ್ರಕರಣ ಇತ್ಯಾದಿಗಳನ್ನು ನೆನಪಿಸಿ] ಕಮ್ಯುನಿಸ್ಟ್ ವಿರೋಧಿ ಹೇಳಿಕೆಗಳಿಗೆ, ಇತರ ಶ್ರೀಮಂತ ರೈತ ಸಂಘಟನೆಗಳ ಹೇಳಿಕೆಗಳಿಗೇ ಹೆಚ್ಚೆಚ್ಚು ಪ್ರಚಾರನೀಡುತ್ತಾ ಕಮ್ಯುನಿಸ್ಟ್ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮ ಬದ್ಧ ಹೋರಾಟಗಳಿಗೆ ಪ್ರಚಾರ ನೀಡದಿರುವುದರ ಹಿಂದಿನ ವರ್ಗಗುಣವನ್ನು ನಾವು ಅರಿಯಬೇಕು. ಮುಂದಿನ ವರ್ಷದ ಜನವರಿಯಲ್ಲಿ ದಿಲ್ಲಿಯಲ್ಲಿ 5 ಲಕ್ಷ ರೈತರ ರ್‍ಯಾಲಿ ನಡೆಯುತ್ತದೆಂಬ ರಾಜಕೀಯೇತರ(!) ರೈತ ಸಂಘಗಳ ಹೇಳಿಕೆಯೇ ಎಲ್ಲಾ ಪತ್ರಿಕೆಗಳಲ್ಲಿ ದೊಡ್ಡಕ್ಷರಗಳಲ್ಲಿ ಪ್ರಕಟವಾಗಿವೆ.

ಪ್ರತಿಕೆಗಳಿಗೆ ಇನ್ನೂ ಒಂದು ಕೆಟ್ಟ ಪ್ರವೃತ್ತಿ ಇದೆ. ಹಿಂಸಾಚಾರ ನಡೆದು, ಹತ್ತಿಪ್ಪತ್ತು ಹೆಣ ಬಿದ್ದರೆ ಅದು ಮೌಲ್ಯಯುತವೂ, ಭಾರವೂ ಆದ ಸುದ್ದಿಯಾಗುತ್ತದೆ. ಈ ನಮ್ಮ ಚಳವಳಿ ನಡೆದಾಗಲೇ, ಆಂಧ್ರಪ್ರದೇಶದಲ್ಲಿ ಲಾಠಿಪ್ರಹಾರ ನಡೆದು ಪಕ್ಷದಶಾಸಕರು ಗಾಯಗೊಂಡ ಸುದ್ದಿ ಮರುದಿನವೇ ಕೆಲವು ಪತ್ರಿಕೆಗಳಲ್ಲಿಪ್ರಕಟವಾಯಿತು. ಉಳಿದಂತೆ ಸಾಮಾನ್ಯವಾಗಿ ಚಳವಳಿ ಶಾಂತವಾಗಿ ನಡೆದಿರುವುದರಿಂದ ಲಕ್ಷಾಂತರ ಜನರು ಬಂಧನಕ್ಕೊಳಗಾದರೂ ಅದು ಪ್ರಕಟಣಾ ಯೋಗ್ಯವಲ್ಲವೆಂದು ಪತ್ರಿಕೆಗಳವರು ನಿರ್ಧರಿಸಿರ ಬೇಕೆಂದು ಕಾಣುತ್ತದೆ.

ಪತ್ರಿಕೆಗಳಲ್ಲಿ ಪ್ರಚಾರ ಸಿಗಲಿಲ್ಲವೆಂದು ಚಳವಳಿಯೇನೂ ಸ್ಥಗಿತವಾಗುದಿಲ್ಲವಲ್ಲ.

– ವಿಶ್ವ ಕುಂದಾಪುರ

ಎಡ ಸರ್ಕಾರಗಳ ಮೇಲೆ....

"ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ (ಐ) ಬಲಗೂಡಿಸಿ ಕೊಳ್ಳುತ್ತಿದೆ" "ಚುನಾವಣೆಗಳಲ್ಲಿ ಎಡರಂಗಕ್ಕೆ ತೀವ್ರ ಸವಾಲು" ಈ ಚುನಾವಣಾ ಕ್ಷೇತ್ರ ಎಡರಂಗದ ಕೈಬಿಡಬಹುದು. ಆಕ್ಷೇತ್ರದಲ್ಲಿ ತೀವ್ರ ಸೋಲಾಗಬಹುದು ಇವು ಮಾರ್ಚ ಚುನಾವಣೆಗಳ ಮೊದಲು ಕಲ್ಕತ್ತೆಯ ದಿ ಟೆಲಿಗ್ರಾಫ್ ಎಂಬ ಪ್ರತಿಷ್ಠಿತ ದೈನಿಕದ ಕೆಲವುಅಗ್ರಪಂಕ್ತಿಗಳಷ್ಟೆ. ಆನಂದ್ ಬಜಾರ್ ಗುಂಪಿನ ಟೆಲಿಗ್ರಾಫ್ ಮತ್ತಿತರ ಪತ್ರಿಕೆಗಳನ್ನು ಓದುವವರಿಗೆ ಇನ್ನೇನು ರಾಜೀವ್ ಗಾಂಧಿಯವರ ಕರೆಯಂತೆ ಪಶ್ಚಿಮ ಬಂಗಾಳದ 'ಕೆಂಪು ಕೋಟೆ' ಬಿರಿದೇ ಬಿಟ್ಟಿದೆ ಎಂಬ ಗುಮಾನಿ ಎಡರಂಗದ ಪಕ್ಷಗಳು ಮೊದಲೇ ಕತ್ತಲಲ್ಲಿ ಕೂತು ಬಿಟ್ಟದೆಯೋ ಎಂಬ ಸಂಶಯ. ಆದರೆ ಚುನಾವಣಾ ಫಲಿತಾಂಶ ಬಂದ ದಿನದ "ಟೆಲಿಗ್ರಾಫ್" ನೋಡಿದವರಿಗೆ ಕಳೆದ ಒಂದು ತಿಂಗಳಿಂದ ನಾವು ಇದೇ ಪತ್ರಿಕೆಯನ್ನೇ ಓದುತ್ತಿದ್ದೇವೆಯೋ ಎಂಬ ಮತ್ತೊಂದು ಗುಮಾನಿ.

"ಏಕೆಂದರೆ ಎಡರಂಗಕ್ಕೆ ಮತ್ತೆ ಭಾರೀ ಜಯ" ಎಂಬ ದಪ್ಪತಲೆ ಬರಹದ ಕೆಳಗೆ ತಮ್ಮ "ವಿಶ್ಲೇಷಣೆ"ಗಳೆಲ್ಲಾ ಏಕೆ ಬುಡಮೇಲಾದವು ಎಂಬ ಬಗ್ಗೆ ಇನ್ನೊಂದು "ವಿಶ್ಲೇಷಣೆ" ಯಾಗಲೀ ಅಥವಾ ವಿಷಾದವಾಗಲೀ ಇಲ್ಲವೇ ಇಲ್ಲ.

ಆದರೆ "ಟೆಲಿಗ್ರಾಫ್" ಪತ್ರಿಕಾ ವಸ್ತು ವಿಷ್ಮತೆಯ ಈ "ಅಮೋಘ" ಪರಂಪರೆ ಇಲ್ಲಿಗೇ ನಿಲ್ಲಲಿಲ್ಲ. ವಿಧಾನ ಸಭೆಯಲ್ಲಿ ಕಾಂಗ್ರೆಸ್(ಐ)ನ ಬಲ ಕುಗ್ಗಿದ್ದರೂ ಮತಗಳ ಶೇಕಡಾವಾರು ಗಮನಾರ್ಹವಾಗಿ ಹೆಚ್ಚಿದೆ ಎಂಬ ಇನ್ನೊಂದು ವಿಶ್ಲೇಷಣೆ! ಕಾಂಗ್ರೆಸ್ (ಐ)ಗೆ ಇದರಿಂದ ಸಂತೋಷವೋ ಸಂತೋಷ ಆದರೆ 1982ರಲ್ಲಿ ಕಾಂಗ್ರೆಸ್(ಐ) ಇತರ ಹಲವು ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅದಕ್ಕೆ ಬೆಂಬಲ ನೀಡಿತ್ತು. 1987ರಲ್ಲಿ ಹಾಗಾಗಲಿಲ್ಲ. 1982ರಲ್ಲಿ ಕಾಂಗ್ರೆಸ್ (ಐ) ಹಾಗೂ ಅದರ ಮಿತ್ರ ಪಕ್ಷಗಳು ಪಡೆದ ಶೇಕಡಾ ಮತಗಳೊಡನೆಕಾಂಗ್ರೆಸ್(ಐ)ನ ಮತಗಳ ದೃಷ್ಟಿಯಿಂದ ಕೂಡಾ ಮುನ್ನಡೆ ಸಾಧಿಸಲಿಲ್ಲ ಎಂಬ ಅಂಶವನ್ನು ಮರೆಮಾಚುವ ವ್ಯರ್ಥ ಪ್ರಯತ್ನ ಇದಾಗಿತ್ತು.

ಈ ಪ್ರಯತ್ನ ವಿಫಲಗೊಂಡ ಮೇಲೆ ಮುಖ್ಯಮಂತ್ರಿ ಜ್ಯೋತಿಬಸುರವರ ಆಪ್ತ ಕಾರ್ಯದರ್ಶಿ ನೆರೆ ಪರಿಹಾರಕ್ಕೆ ವಸೂಲಾದ ಸುಮಾರು 30 ಲಕ್ಷ ರೂಪಾಯಿಗಳನ್ನು ಕಬಳಿಸಿದ್ದಾರೆಂಬ ಆಪಾದನೆ. "ಪುರಾವೆ" ಸಹಿತ ಅಬ್ಬರ! ವಿಧಾನಸಭೆಯಲ್ಲಿ ಬಿನೊಯ್ ಚೌಧುರಿಯವರ ಸ್ಪಷ್ಟ ಹೇಳಿಕೆಯ ನಂತರ ಮುಖಭಂಗವಾದ ಟೆಲಿಗ್ರಾಫ್ ಅದನ್ನು ಕೈ ಬಿಟ್ಟಿತ್ತು.

ಇತ್ತೀಚೆಗೆ ಮತ್ತೆ ಸೆಪ್ಟಂಬರ್ 5ರ ಟೆಲಿಗ್ರಾಫ್‌ನಲ್ಲೊಂದು ದೊಡ್ಡ ಸುದ್ದಿ "ಸಿ.ಪಿ.ಐ.(ಎಂ) ಪರ ಶಿಕ್ಷಕರು ಕಲ್ಕತ್ತಾ ವಿ.ವಿ.ಯ ಹಣ ಕಬಳಿಸಿದ್ದಾರೆ." ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು ಈಗ ರಜಾದ ಮೇಲಿರುವ ಡಾ.ವಿಪ್ಲವ ದಾಸ್‌ಗುಪ್ತ ತಮ್ಮ ಮೇಲಿನ ಆಪಾದನೆಗೆ ತಕ್ಕ ಉತ್ತರ ನೀಡಿದ ಮೇಲೂ ಪತ್ರಿಕೆ ಅದೇ ರಾಗ ಮುಂದುವರಿಸಿದಾಗ ದಾಸ್‌ಗುಪ್ತಾ ಒಂಬತ್ತು ನಿರ್ದಿಷ್ಟ ಪ್ರಶ್ನೆಗಳನ್ನು ಕಳಿಸಿ, ಇದಕ್ಕೆ ಉತ್ತರ ನೀಡಿ ಎಂದು ಪತ್ರಿಕೆಗೆ ಸವಾಲೆಸೆದರು. ಪತ್ರಿಕೆ ಈ ಪ್ರಶ್ನೆಗಳನ್ನೇನೋ ಪ್ರಕಟಿಸಿತು. ಆದರೆ ಉತ್ತರಗಳಿಲ್ಲ. ಮಾತ್ರವಲ್ಲ ಕಾನೂನುಕ್ರಮಕ್ಕೆ ಹೆದರಿತಾವೂ ಈ ಚರ್ಚೆಯನ್ನು ಮುಂದುವರಿಸ ಬಯಸುವುದಿಲ್ಲ. ಎಂಬ ಹೇಳಿಕೆಯೂ ಅದರ ಜತೆಗಿತ್ತು! ತಾವೂ ಮಾಡಿದ ಆಪಾದನೆ ನಿಜವಾಗಿದ್ದರೆ ಕಾನೂನು ಕ್ರಮದ ಭಯವೇಕೆ? ಸಾರ್ವಜನಿಕ ಚರ್ಚೆಯಿಂದ ಓಡಿಹೋಗಬೇಕೇಕೆ?

ತಮ್ಮ "ವಸ್ತುನಿಷ್ಠತೆ" ಈ ರೀತಿ ಹಲವು ಬಾರಿ ಬೀದಿ ಪಾಲಾದರೂ ಕಲ್ಕತ್ತೆಯ ಬೂರ್ಜ್ವಾ ಪತ್ರಿಕೆಗಳು ಒಂದಿಲ್ಲೊಂದು ರೀತಿಯಲ್ಲಿ ಎಡರಂಗ ಸರ್ಕಾರದ ವಿರುದ್ಧ ಅಪಪ್ರಚಾರ ಮುಂದುವರೆಸುತ್ತಿವೆ. ಏಕೆಂದರೆ ಸಣಬು ಮಾಲಿಕರ ಈ "ಮುಖವಾಣಿ" ಗಳ ಒಂದು ಮುಖ್ಯ ಉದ್ದೇಶವೇ ಅದು. ಸಣಬು ಬಂಡವಾಳಗಾರರ ಹಿತಾಸಕ್ತಿ ರಕ್ಷಿಸುವ ಸರ್ಕಾರವಿಲ್ಲದಿದ್ದಾಗ, ಅವರಿಗೆ ತಮ್ಮ ವರ್ಗ ಶತ್ರುಗಳ ಈ ಸರಕಾರವನ್ನೆದುರಿಸಲು ಮತ್ತೇನು ಮಾಡಲು ಸಾಧ್ಯ.

ಎಡ ಶಕ್ತಿಗಳು ಬಲವಾಗಿರುವ ಇನ್ನೊಂದು ರಾಜ್ಯ ಕೇರಳದಲ್ಲೂ ಅಲ್ಲಿನ ರಬ್ಬರ್ ಪ್ಲಾಂಟೇಶನ್ ಮಾಲಕರ ಕಪಿಮುಷ್ಠಿಯಲ್ಲಿರುವ ದೊಡ್ಡ ಮಲೆಯಾಳೀ ಪತ್ರಿಕೆಗಳದ್ದೂ ಇದೇ ರೀತಿಯ ಪಾತ್ರ. 1957ರಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯುವಾಗ ಮಳೆಯಾಳ ಮನೋರಮ'ಪತ್ರಿಕೆಯ, ಮಾಲಕ ಮೊಮೀನ್‌ಮಾಪಿಳ್ಳೈಯವರು ಕಮ್ಯೂನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದರೆ ತಾನು ಮಾತ್ರವಲ್ಲ. ತನ್ನ ಮನೆಯವರೆಲ್ಲರೂ ವಿಷ ಕುಡಿದು ಸಾಯುತ್ತೇವೆ ಎಂದ್ದಿದರಂತೆ. 1957 ರಲ್ಲಿ ಇ.ಎಂ.ಎಸ್ ನೇತೃತ್ವದಲ್ಲಿ ಕಮ್ಯುನಿಸ್ಟ್ ಸರ್ಕಾರ ಬಂತು. ಮೊಮೀನ್‌ರಾಗಲೀ, ಅವರಕುಟುಂಬದ ಬೇರೆ ಯಾರೇ ಆಗಲಿ ವಿಷ ಕುಡಿಯಲಿಲ್ಲ. ಆದರೆ ಅವರ ಪತ್ರಿಕೆ ಇನ್ನೂ ಅಂದು ಆರಂಭಿಸಿದ ವಿಷ ಕಾರುವ ಪ್ರಚಾರ ಮಾತ್ರ ಬಿಡಲಿಲ್ಲ. ಮಾರ್ಚ್ ಚುನಾವಣೆಗಳ ಸಮಯದಲ್ಲಿ "ಟೆಲಿಗ್ರಾಫ್" ನಂತೆ ಮನೋರಮಾ, ಮಾತೃಭೂಮಿ ಮುಂತಾದ ದೊಡ್ಡ ಮಲೆಯಾಳೀ ಪತ್ರಿಕೆಗಳು ಕರುಣಾಕರನ್ ನೇತೃತ್ವದ ಯು.ಡಿ.ಎಫ್. ಖಂಡಿತಾ ಅಧಿಕಾರಕ್ಕೆ ಮರಳುವುದಾಗಿ ಭವಿಷ್ಯ ನುಡಿದದ್ದೇ ನುಡಿದದ್ದು. ಮನೋರಮಾ ಪತ್ರಿಕೆ ಯು.ಡಿ.ಎಫ್. ಸುಮಾರು 120ಸ್ಥಾನ ಗೆದ್ದೇಗೆಲ್ಲುತ್ತದೆಂದು ಭರವಸೆ ಹೊಂದಿತ್ತು. ಮತ ಏಣಿಕೆ ನಡೆದು ಅವರ ಲೆಕ್ಕಾಚಾರಗಳೆಲ್ಲಾ ತಲೆಕೆಳಗಾಗುತ್ತಿದ್ದಂತೆ, ಅತ್ತ ಕಾಂ.ನಯನಾರ್‌ರ ಕ್ಷೇತ್ರಕ್ಕೆ ಸೇರಿದ ಚೆಮೀನ್ ಎಂಬಲ್ಲಿ ಯು.ಡಿ ಎಫ್. ಗೂಂಡಾಗಳು ನಡೆಸಿದ ಅಮಾನುಷ ಕೃತ್ಯವನ್ನು ಬ್ಲಾಕ್ ಔಟ್ ಮಾಡಿಬಿಟ್ಟ ಈ ಪತ್ರಿಕೆಗಳು ಎಲ್.ಡಿ ಎಫ್ ಸರ್ಕಾರ ಬಂದ ಮೇಲೆ ಪತ್ರಿಕಾ ಸ್ವಾತಂತ್ರ್ಯ ಕಾನೂನು ವ್ಯವಸ್ಥೆಯ ಬಗ್ಗೆ ಬೊಬ್ಬೆ ಹಾಕುತ್ತಿವೆ.

ಇತ್ತೀಚೆಗೆ ರಾಘವನ್ ಉಚ್ಚಾಟನೆಯಾದಾಗ ಈ ಪತ್ರಿಕೆಗಳು ಎಷ್ಟೊಂದು ಧೂಳು ಎಬ್ಬಿಸಿದವೆಂಬುದು ಐಕ್ಯರಂಗ, ಓದುಗರಿಗೆ ಚೆನ್ನಾಗಿ ಗೊತ್ತಿದೆ. ಮಾರ್ಚ್ ಚುನಾವಣೆಗಳಲ್ಲಿ ರಾಘವನ್ ಪಕ್ಷ "ಕುಲಗೆಟ್ಟ ಪಕ್ಷ" ಎಂದು ಕೇರಳದ ಜನತೆ ತೀರ್ಪಿತ್ತ ಮೇಲೆ ಈ ಪತ್ರಿಕೆಗಳು ಈಗ ಪೂರ್ಣ ಮೌನ ತಾಳಿವೆ. "ವಸ್ತುನಿಷ್ಟ ಪತ್ರಕರ್ತ"ರ ಇನ್ನೊಂದು ಅಪೂರ್ವ ಉದಾಹರಣೆಯಿದು. ತಾವು ಮಾತ್ರ ಪ್ರಜಾಪ್ರಭುತ್ವದ ಗುತ್ತೆದಾರರು ಎಚ್ಚರಿಕೆ ವಹಿಸುವ 'ಮನೋರಮಾ' ಪತ್ರಿಕೆಯಲ್ಲಿ ಇದುವರೆಗೂ ಯೂನಿಯನ್ ರಚಿಸದಂತೆ ಪತ್ರಿಕೆಯ ರಬ್ಬರ್ ಪ್ಲಾಂಟೇಶನ್ ಹಿತಾಸಕ್ತಿಗಳು ನೋಡಿಕೊಂಡಿವೆ. ಆದರೆ ಕಳೆದ ಬಾರಿ ಕೇರಳ ಪತ್ರಕರ್ತರ ಸಂಘದ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಅಭ್ಯರ್ಥಿ ಆರಿಸಿಬರುವಂತೆ ಅವರು ಮಾಡಿದ ಸರ್ವ ಪ್ರಯತ್ನ ವಿಫಲವಾಗಿ, ಆ ಅಭ್ಯರ್ಥಿ ಸೋತಾಗ, ಈ ಯಶಸ್ಸಿಗಾಗಿ ರಾಜ್ಯದ ಪತ್ರಕರ್ತರ ಸಂಘಟನೆಯನ್ನು ಮನೋರಮಾ ಪತ್ರಿಕೆಯಲ್ಲಿ ದುಡಿಯುತ್ತಿರುವವರು ಅಭಿನಂದಿಸಿದರು !

ಡಿ.ವೈ.ಎಫ್.ಐ.ನ 'ಮಾನವ ಸರಪಳಿ'ಯ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಯುತ್ತಿರುವಾಗ ಅಲ್ಲಲ್ಲಿ ಕುಚ್ಚಿತ ಟೀಕೆ ಮಾಡಿ, ಅಥವಾ ಮೌನ ತಾಳಿ ಉಪೇಕ್ಷಿಸಲು ಪ್ರಯತ್ನಿಸಿದ ಈ ಪತ್ರಿಕೆಗಳು ಆಗಸ್ಟ್ 16ರಂದು ಮಾನವ ಸರಪಳಿಯ ಅದ್ಭುತ ಯಶಸ್ಸನ್ನು ದಪ್ಪಕ್ಷರಗಳಲ್ಲಿ ಪ್ರಕಟಿಸಿದವು. ಇದಕ್ಕೆ ಹೀಗೆ ಎಂದು ವಿಚಾರಿಸಿದಾಗ. "ನಮ್ಮದು ವ್ಯಾಪಾರೀ ಸಂಸ್ಥೆ, ಸ್ವಾಮಿ" ಎಂದರಂತೆ ಈ ಮಾಲಕರು.

ಹೌದು, ಕೇರಳದ ಜನತೆಗೆ ಪಶ್ಚಿಮ ಬಂಗಾಳದ ಜನತೆಗೆ, ಅಷ್ಟೇ ಏಕೆ, ಸಮಸ್ತದೇಶದ ಪ್ರಜ್ಞಾಶೀಲ ದುಡಿಯುವ ಜನಕ್ಕೆ ಗೊತ್ತಿದೆ ಪತ್ರಿಕಾರಂಗ ಮುಖ್ಯತಃ ಇನ್ನೊಂದು ಬಿಸಿನೆಸ್ ಎಂದು. ಜನತೆಗೆ ಅವು ದೇಶದ ಬಂಡವಾಳಶಾಹಿಗಳ ಮುಖವಾಣಿಗಳೂ ಕೂಡಾ ಎಂಬುದು ಗೊತ್ತಿದೆ. ವರ್ಗ ಶಕ್ತಿಗಳ ಸ್ಪಷ್ಟ ಧೃವೀಕರಣ ನಡೆದಿರುವ ಪಶ್ಚಿಮ ಬಂಗಾಳ ಮತ್ತು ಕೇರಳದಂತಹ ರಾಜ್ಯಗಳಲ್ಲಿ ಇದು ಸಾಧ್ಯವಿಲ್ಲ. ಪಶ್ಚಿಮ ಬಂಗಾಳದಲ್ಲಿ ಸಣಬು ಬೆಳೆಗಾರರ ಪರವಾಗಿ ಕೇರಳದಲ್ಲಿ ರಬ್ಬರ್ ಪ್ಲಾಂಟೇಶನ್ ಕಾರ್ಮಿಕರ ಪರವಾಗಿ, ಹೋರಾಡುವ ಜನಪರ ಎಡ ಶಕ್ತಿಗಳು ಅಧಿಕಾರಕ್ಕೆ ಬಂದು ಸೆಣಬು ಮಾಲಕರೊಂದಿಗೆ ರಬ್ಬರ್ ಪ್ಲಾಂಟೇಶನ್ ಮಾಲಕರೊಂದಿಗೆ ಕಾನೂನಿನ ಪ್ರಕಾರ ನಿಷ್ಠುರವಾಗಿ ವರ್ತಿಸುವಾಗ, ಅವರು ತಮ್ಮ ಹಿಡಿತದಲ್ಲಿರುವ ಪತ್ರಿಕೆಗಳನ್ನು ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ನೇರವಾಗಿಯೇ ಬಳಸುತ್ತಾರೆ. ಅಕ್ಬರರಂತಹ 'ಖ್ಯಾತ' ಪತ್ರಕರ್ತರು ತಮ್ಮ ವಸ್ತು ನಿಷ್ಟತೆಯ ಪ್ರಲಾಪಗಳನ್ನೆಲ್ಲ ಮರೆತು ತಮ್ಮ ಬುದ್ಧಿಮತಿಯನ್ನು ತಮ್ಮ ಮಾಲಕರುಗಳ ಸೇವೆಗೆ ಧಾರೆಯೆರೆಯುತ್ತಾರೆ. ಆ ಪ್ರತಿಕೆಯಲ್ಲಿ ಭವಿಷ್ಯ ಕಾರ್ಮಿಕ ವರ್ಗದ್ದು ಹಾಗೂ ಅದರ ಮುಂಚೂಣಿಯಲ್ಲಿರುವ ಪಕ್ಷದಲ್ಲಿ ಎಂಬ ಕಟ್ಟು ವಾಸ್ತವತೆಯನ್ನು ಈ ಬುದ್ಧಿವಂತರು ಮರೆಯುತ್ತಾರೆ.

○

[4ನೇ ಪುಟದಿಂದ]

ದೂರ ಒಂದು ಮಾನವ ಗೋಡೆ ನಿರ್ಮಾಣವಾಯಿತು. ಪುರುಷರು, ಮಹಿಳೆಯರು, ಮಕ್ಕಳು ಪರಸ್ಪರ ಕೈ ಹಿಡಿದು ನಿಂತು "ಗೋಡೆ" ನಿರ್ಮಿಸಿದ್ದರು. ಸಾಮಾನ್ಯ ದೃಶ್ಯದ ದೃಷ್ಟಿಯಿಂದ ಅದ್ಭುತವಾದ ಸನ್ನಿವೇಶ, ಭಾವನಾತ್ಮಕವಾಗಿಯೂ ಮಹತ್ವದ್ದು. "ವಿಚ್ಛಿದ್ರಕಾರಿ ಶಕ್ತಿಗಳ" ವಿರುದ್ಧ ಪ್ರತಿಭಟನೆ ಮತ್ತು ಏಕತೆಯ ಸೂಚನೆಯಾಗಿ ನಡೆದ ಕಾರ್ಯಕ್ರಮ ಅದು. ಆದರೆ ದೂರದರ್ಶನಕ್ಕೆ ಸುದ್ಧಿಯಾಗಲಿಲ್ಲ. ಅದಕ್ಕೆ ಕಾರಣ ಇಷ್ಟೇ: ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದ ಡೆಮೊಕ್ರಾಟಿಕ್ ಯೂತ್ ಫೆಡರೇಷನ್ ಆ ಕಾರ್ಯಕ್ರಮವನ್ನು ಏರ್ಪಡಿಸಿತು.

ತನಗೆ ಸುದ್ಧಿಯ ಪ್ರಜ್ಞೆಯಿಲ್ಲ ಎನ್ನುವುದನ್ನು ದೂರದರ್ಶನ ಮತ್ತೆ ಸ್ಥಿರಪಡಿಸಿತಲ್ಲದೆ ದೇಶಭಕ್ತಿ, ದೇಶದ ಸಮಗ್ರತೆ, ಏಕತೆ ಬಗ್ಗೆ ಆಳುವವರು ಹೇಳುವ ಮಾತೆಲ್ಲಾ ಆಳವಿಲ್ಲದ್ದು ಎನ್ನುವ ಭಾವನೆಯೂ ದೂರದರ್ಶನದಿಂದಾಗಿ ಬೆಳೆಯುತ್ತಿದೆ. ದೇಶದ ಹಿತಕ್ಕೆ ಪ್ರಾಧಾನ್ಯ ನೀಡುವುದು ದೂರದರ್ಶನದ ನೀತಿಯಾದರೆ ಕೇರಳದ ಈ ವಿಶಿಷ್ಟ ಕಾರ್ಯ ಕ್ರಮಕ್ಕೆ ಏಕೆ ಪ್ರಚಾರ ನೀಡಲಿಲ್ಲ ?

ಅತ್ಯಂತ ಸಾಮಾನ್ಯನೂ ಕೇಳುವ ಒಂದು ಪ್ರಶ್ನೆಯೆಂದರೆ ದೂರದರ್ಶನ ಮತ್ತು ಆಕಾಶವಾಣಿಗಳುತಮ್ಮ ವಿಶ್ವಾಸಾರ್ಹತೆಯನ್ನು ತಾವೇ ನಾಶಮಾಡಿಕೊಳ್ಳುತ್ತಿವೆ ಏಕೆ ? ಎನ್ನುವುದು.

ಕಲಕತ್ತೆಯ ವಿಚಾರಗೋಷ್ಟಿಯಲ್ಲಿ ಹದಿನಾಲ್ಕು ಸಾವಿರ ಮಂದಿ ಭಾಗವಹಿಸಿದ್ದರೆ ಕೇರಳದ ಕಾರ್ಯ ಕ್ರಮದಲ್ಲಿ ಏಳು ಲಕ್ಷ ಮಂದಿ ಭಾಗವಹಿಸಿದ್ದರು. ಭಾಗವಹಿಸಿದ್ದವರೇ ಇಷ್ಟು ಮಂದಿ ಎಂದ ಮೇಲೆ ಭಾಗವಹಿಸದ, ಆದರೆ ಆ ಕಾರ್ಯಕ್ರಮಗಳಲ್ಲಿ ಕುತೂಹಲ ವಿದ್ದ ಸಂಖ್ಯೆಯ ಜನ ಇನ್ನೂ ಎಷ್ಟೋ ಪಾಲು ಹೆಚ್ಚು. ಅಷ್ಟೊಂದು ಮಂದಿಗೆ ದೂರದರ್ಶನದ ವರ್ತನೆಯಿಂದ ನಿರಾಶೆಯಾಗಿರುತ್ತದೆ. ಅವರುಗಳು ಬೀದಿಗೆ ಇಳಿದು ತಮ್ಮ ನಿರಾಶೆಯನ್ನು ಪ್ರದರ್ಶಿಸದಿರಬಹುದು. ಆದರೆ ದೂರದರ್ಶನದ ವಿಷಯದಲ್ಲಿ ಅಸಮಾಧಾನವಂತೂ ಆಗಿರುತ್ತದೆ.

ಸ್ವಾರಸ್ಯವೆಂದರೆ ದೂರದರ್ಶನ ಮತ್ತು ಆಕಾಶವಾಣಿಯ ಈಗಿನ ನೀತಿ ಆಡಳಿತ ಪಕ್ಷಕ್ಕೇ ಆತ್ಮಘಾತಕ ಎನ್ನುವುದು ಕೇವಲ ಆರು ತಿಂಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿಯೇ ಸ್ಥಿರಪಟ್ಟಿತು ಎನ್ನುವುದು.

ಮಾರ್ಚಿ ಚುನಾವಣೆಗೆ ಮುಂಚೆ ಆಡಳಿತ ರಂಗದ ಪಕ್ಷಗಳು ಪಕ್ಷಪಾತವನ್ನು ಪ್ರತಿಭಟಿಸಿ ದೂರದರ್ಶನ ಮತ್ತು ಆಕಾಶವಾಣಿಯನ್ನು ಬಹಿಷ್ಕರಿಸಿದವು. ಚುನಾವಣೆಯಲ್ಲಿ ಪ್ರಚಾರ ಗಿಟ್ಟಿಸಿದ ಕಾಂಗ್ರೆಗೆ ಹಿಂದಿನ ಸಭೆಯಲ್ಲಿದ್ದುದಕ್ಕಿಂತ ಕಡಿಮೆ ಸ್ಥಾನಗಳು ದೊರಕಿದವು !

(ಕನ್ನಡ ಪ್ರಭ ಕೃಪೆ)

ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರ

ಈ ಲೇಖನ ಅಚ್ಚಿಗೆ ಕಳುಹಿಸುವ ಹೊತಿನಲ್ಲಿ ರಿಸರ್ವ್‌ಬ್ಯಾಂಕ್ ನೌಕರರು ದೇಶದಾದ್ಯಂತ 22 ಕೇಂದ್ರಗಳಲ್ಲಿ ಒಂದು ದಿನದ ಯಶಸ್ವಿ ಮುಷ್ಕರವನ್ನು ಆಚರಿಸಿರುತ್ತಾರೆ. ಅದೇ ಸಮಯದಲ್ಲಿ ಬೆಂಗಳೂರು ನೌಕರರಯಶಸ್ವಿಮುಷ್ಕರ 37ನೇ ದಿನಕ್ಕೆ ಕಾಲಿಟ್ಟಿದೆ. ಮುಷ್ಕರಕ್ಕೆ ಕಾರಣ ಸಂಘಟನೆಯ ಮೇಲೆ ಆಕ್ರಮಣ. ರಿಸರ್ವ್ ಬ್ಯಾಂಕ್ ಎಂಪ್ಲಾಯಿಸ್ ಎಸೋಸಿಯೇಶನಿನ ಉಪಾಧ್ಯಕ್ಷರಾದ ಕಾ.ಟಿ ಎಲ್.ಲಕ್ಷ್ಮಿನಾರಾಯಣ, ಜತೆಕಾರ್ಯದರ್ಶಿಕಾ. ಆರ‍್ಮುಗಂ, ಕಾರ್ಯದರ್ಶಿ ಸಮಿತಿ ಸದಸ್ಯ ಕಾ ಷಣ್ಮುಗಂ ಇವರನ್ನು ಅಮಾನತಿನಲ್ಲಿ ಇಟ್ಟಿರುವುದೇ ಅಲ್ಲದೆ, ಏಳು ಕಾರ್ಯಕರ್ತರ ಮೇಲೆ ಸುಳ್ಳು ಆಪಾದನೆ ಹೊರಿಸಿ ಪೋಲೀಸು ಕೇಸು ಹಾಕಿದ್ದಾರೆ. ಇದರ ವಿರುದ್ಧ ಸಿಡಿದೆದ್ದಿದ್ದಾರೆ. ನೌಕರರು.

ರಾಜೀವ್‌ಗಾಂಧಿಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯಿಂದ ಉತ್ತೇಜಿತಗೊಂಡ ರಿಸರ್ವ್‌ಬ್ಯಾಂಕ್ ಆಡಳಿತ ವರ್ಗ ಹೆಚ್ಚಿನ ಕೇಂದ್ರಗಳಲ್ಲಿ ನೌಕರರ ಸಂಘಟನೆಗಳ ಹಕ್ಕುಗಳನ್ನು ದಮನ ಮಾಡಲು ಆರಂಭ ಮಾಡಿತ್ತು. ಬೆಂಗಳೂರು ಆಫೀಸಿಗೆ, ನೌಕರ ವಿರೋಧಿ ಎಂದೇ ಪ್ರಸಿದ್ಧಗೊಂಡ ಒಬ್ಬ ಮೆನೇಜರ್ ಅವರನ್ನು ಎರಡು ವರ್ಷದ ಹಿಂದೆಯೇ ಕಳುಹಿಸಲಾಗಿತ್ತು. ಈ ಮೆನೇಜರ್ ಎಷ್ಟು ಕುಪ್ರಸಿದ್ಧ ಎಂದರೆ 1982 ರಲ್ಲಿ ರಿಸರ್ವ್ ಬ್ಯಾಂಕ್‌ನಲ್ಲಿ ಅಖಿಲ ಭಾರತ ಮಟ್ಟದಲ್ಲಿ ಹೋರಾಟ ನಡೆಯುತ್ತಿರುವಾಗ, ಕಾನ್ಪುರದಲ್ಲಿ ಕಮಿಟಿಯ ಎಲ್ಲ ಸದಸ್ಯರನ್ನು (ಒಟ್ಟಿಗೇ ಒಂಬತ್ತು ಜನ) ವಜಾ ಮಾಡಿದ್ದು.

ಕಳೆದ ಒಂದುವರೆ-ಎರಡು ವರ್ಷದಿಂದೀಚೆಗೆ ಸಾಧಾರಣ 200 ಚಾರ್ಜ್ ಶೀಟ್‌ಗಳನ್ನು ನೌಕರರಿಗೆ ನೀಡಲಾಗಿತ್ತು. ದಿನವೊಂದಕ್ಕೆ 4-5 ವಿಚಾರಣೆಯ 'ಸೋಗು'ಗಳನ್ನು ಮಾಡಲಾಗುತಿತ್ತು. ಹಾಗೂ ಹಲವಾರು ವಿಧದ

(6ನೇ ಪುಟ ನೋಡಿ)

ಕಾ॥ ಮುಹಮ್ಮದ್‌ಹಸನ್‌ಖಾನ್ ಸ್ಮರಣ ಕಟ್ಟಡ

ಗುಲ್ಬರ್ಗಾ ಜಿಲ್ಲೆಯ ಜನಪ್ರಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡರಾದ ದಿವಂಗತ ಮುಹಮ್ಮದ್ ಹಸನ್‌ಖಾನ್ ಅವರ ಸ್ಮರಣಾರ್ಥ ಪಕ್ಷದ ಒಂದು ಬೃಹತ್ ಕಟ್ಟಡ ನಿರ್ಮಿಸಲು ಸಿ.ಪಿ.ಐ. (ಎಂ) ಪಕ್ಷದ ಗುಲ್ಬರ್ಗಾ ಜಿಲ್ಲಾ ಸಮಿತಿ ನಿರ್ಧರಿಸಿದೆ. ಈಗಾಗಲೇ 60x75 ಅಡಿ ಉದ್ದಗಲದ ಜಾಗವನ್ನು ಖರೀದಿ ಮಾಡುವ ಸಿದ್ಧತೆ ನಡೆದಿದೆ. ಖುಲ್ಲಾ ಜಾಗದ ಸಲುವಾಗಿ ರೂ. 42 ಸಾವಿರ ಬೇಕಾಗಿದ್ದು ಈಗಾಗಲೇ ರೂ. 32 ಸಾವಿರ ಶೇಖರಿಸಲಾಗಿದೆ. ಕೆಲವೇ ಪಕ್ಷದ ಮುಖಂಡರ ವೈಯಕ್ತಿಕ ಜವಾಬ್ದಾರಿಯಿಂದ ಈ ಹಣ ಕೂಡಿಸಲಾಗಿದೆ. ಇನ್ನೊಂದು ತಿಂಗಳೊಳಗಾಗಿ ಜಾಗವನ್ನು ಖರೀದಿಸುವ ಸಿದ್ಧತೆ ನಡೆದಿದೆ. ಪಕ್ಷದ ಪ್ರತಿಯೊಬ್ಬ ಸದಸ್ಯ ಒಂದು ತಿಂಗಳ ವೇತನ ಕೊಡಲು ಒಪ್ಪಿದ್ದು ಅದನ್ನು ಮೂರು ಕಂತುಗಳಲ್ಲಿ ಜಮಾ ಮಾಡಲಾಗುತ್ತಿದೆ. ರೂ. 2 ಕೂಪನ್‌ಗಳ ಮೂಲಕ ಒಂದು ಲಕ್ಷ ನಿಧಿ ಕೂಡಿಸಲಾಗುವುದೆಂದು ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿಯವರು ತಿಳಿಸಿದರು. ತಾ 18ರಂದು ನಡೆದ ಜಿಲ್ಲಾ ಸಮಿತಿ ಮತ್ತು ಶಾಖಾ ಕಾರ್ಯದರ್ಶಿಗಳ ಸಭೆಯಲ್ಲಿ ಸೆಕ್ರೆಟಾರಿಯೇಟ್ ಸದಸ್ಯರಾದ ಎನ್.ಕೆ. ಉಪಾಧ್ಯಾಯರು ಆಗಸ್ಟ್ ತಿಂಗಳ ಕೇಂದ್ರ ಸಮಿತಿಯ ರಾಜಕೀಯ ನಿರ್ಣಯ ವಿವರಿಸಿದರು.

ಎಸ್. ಎಫ್. ಐ. ಸುದ್ದಿಗಳು

ಕಾನೂನು ಕಾಲೇಜ್ ಘಟಕ

ಮಂಗಳೂರಿನ ಎಸ್.ಡಿ.ಎಂ. ಲಾ ಕಾಲೇಜಿನಲ್ಲಿ ಎಸ್.ಎಫ್.ಐ. ಘಟಕವನ್ನು ಸೆ. 24ರಂದು ಸುಳ್ಯದ ನ್ಯಾಯವಾದಿ ಕಾ. ಸೂರ್ಯನಾರಾಯಣ ಭಟ್ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಕೆ. ಎಂ. ಸಿ. ಆಸ್ಪತ್ರೆಯ ಪ್ರೊಫೆಸರ್ ನರೇಂದ್ರ ನಾಯಕ್ ಮಾತನಾಡಿ ಮಂಗಳೂರು ವಿ.ವಿ. ಕಾಲೇಜುಗಳಿಗೆ ನೀಡಲು ನಡೆಸುತ್ತಿರುವ ಸ್ವಾಯತ್ತತೆಯ ನಿಯಮಾವಳಿಯ ವಿರುದ್ಧ ವಿದ್ಯಾರ್ಥಿ, ಅಧ್ಯಾಪಕ, ನೌಕರರು, ಐಕ್ಯ ಹೋರಾಟ ನಡೆಸ ಬೇಕೆಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಕಾ. ಕೆ.ಡಿ. ಬಾಬು ವಹಿಸಿದರು. ನೂತನವಾಗಿ ರಚಿಸಲಾದ ಘಟಕಕ್ಕೆ ಕಾ. ಮುಹಮ್ಮದ್ ಹನೀಫ್ (ಅಧ್ಯಕ್ಷ) ಕೆ.ಡಿ. ಬಾಬು (ಉಪಾಧ್ಯಕ್ಷ) ರಜಿ ಜಾರ್ಜ್ (ಕಾರ್ಯದರ್ಶಿ) ಡೆನ್ನಿ.ವಿ.ಕೆ. (ಜೊತೆ ಕಾರ್ಯದರ್ಶಿ) ದಿನೇಶ್ ಕುಮಾರ್ (ಖಜಾಂಚಿ) ಹಾಗೂ 7 ಮಂದಿ ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಯಿತು. ಉಡುಪಿ ಕಾಲೇಜಿನ ಜಯಚಂದ್ರ, ಕೆ.ಆರ್.ಇ.ಸಿ. ಕಾಲೇಜಿನ ಶ್ರಿನಿವಾಸರಾವ್ ಶುಭಕೋರಿ ಮಾತನಾಡಿದರು. ರಜಿಜಾರ್ಜ್ ಸ್ವಾಗತಿಸಿ ಮುಹಮ್ಮದ್‌ಹನೀಫ್ ವಂದಿಸಿದರು.

ಕಾಲ್ನಡೆ ಜಾಥ

ಮೊಳಕಾಲ್ಮುರು ತಾಲ್ಲೋಕಿನ ನಾಗ ಸಮುದ್ರದಲ್ಲಿರುವ ಪ್ರಿ-ಮೆಟ್ರಿಕ್ ಸರ್ಕಾರಿ ಹಾಸ್ಟಲ್‌ನಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳಾದ ನೋಟ್ಸ್ ಪುಸ್ತಕ, ಹಾಸಿಗೆ, ವಿದ್ಯುತ್ ದೀಪ ಪೂರೈಸಿಲ್ಲ. ಊಟ ವ್ಯವಸ್ಥೆ ಸಯಿಲ್ಲದೆ ವಿದ್ಯಾರ್ಥಿಗಳೇ ಕಟ್ಟಿಗೆತ[illegible] ದಗಿಸ ಬೇಕಾಗಿದೆ. ಅಡಿಗೆ ಭಟ್ಟರಾಗಲೀ ವಾರ್ಡನ್‌ರಾಗಲಿ ಉಸ್ತುವಾರಿಕೆ ನೋಡುವವರಾರು ಇಲ್ಲದೆ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೀವ್ರ ರೀತಿಯ ಅಡ್ಡಿವುಂಟಾಗಿರುವುದನ್ನು ಪ್ರತಿಭಟಿಸಿ ಎಸ್. ಎಫ್.ಐ. ಸೆ.16ರಂದು ನಾಗಸಮುದ್ರದಿಂದ ಮೊಳಕಾಲ್ಮುರಿಗೆ 5 ಕಿ.ಮೀ. ಕಾಲ್ನಡೆಜಾಥ ನಡೆಯಿತು. 100 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಜಾಥಾದ ಮುಂದಾಳತ್ವವನ್ನು ಕಾ. ಎ.ಜಿ. ಗಂಗಾಧರ, ಅಣ್ಣಪ್ಪ, ಮರಿಯಪ್ಪ ಗೋವಿಂದ ವಹಿಸಿದ್ದರು. ಬಿ.ಡಿ.ಓ.ಗೆ ಮನವಿ ಅರ್ಪಿಸಿ ಮಾತುಕತೆ ನಡೆಸಲಾಯಿತು. ಕೆಲ ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿದರು.

ಹೂವಿನ ಹಡಗಲಿ ಘಟಕ

ಎಸ್.ಎಫ್.ಐ. ಹೂವಿನ ಹಡಗಲಿ ಸ್ಥಳೀಯ ಘಟಕ ಸಭೆ ಆಗಸ್ಟ್ ಕೊನೆವಾರ ಸಭೆ ಸೇರಿ ಪ್ರಸಕ್ತ ಸಾಲಿಗೆ ಸಂಚಾಲಕರಾಗಿ ಕಾ. ಶ್ರೀಕಾಂತ್ ಹವಾಲ್ದಾರ್, ಸಹ ಸಂಚಾಲಕರಾಗಿ ಕಾ. ಹೆಚ್. ಎಂ. ಜಂಬುನಾಥ್ ಮತ್ತು ಕಾ. ಬಿ. ಪೀರ್ ಭಾಷ್‌ರವರವರನ್ನು ಸದಸ್ಯರಾಗಿ ಕಾ. ಶಿಲ್ಪಿ ನಿರಂಜನ ಮೂರ್ತಿ ಹಾಗೂ ಎಲ್. ಖಾದರ್‌ರವರುಗಳನ್ನು ಆಯ್ಕೆ ಮಾಡಲಾಯಿತು.

ಡಿ. ವೈ. ಎಫ್. ಐ. ದುಗ್ಗನ ಹಳ್ಳಿ ಮಂಡಲ ಘಟಕ

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೋಕಿನ ದುಗ್ಗನಹಳ್ಳಿ ಮಂಡಲ್ ಪಂಚಾಯತ್ ಮಟ್ಟದ ಡಿ.ವೈ.ಎಫ್.ಐ. ಘಟಕವನ್ನು ಸೆ. 19 ರಂದು ಉದ್ಘಾಟಿಸಲಾಯಿತು. ಗ್ರಾಮ ಲೆಕ್ಕಾಧಿಕಾರಿ ಹುಚ್ಚಯ್ಯ ಧ್ವಜಾರೋಹಣ ಮಾಡಿದರು. ಪುಟ್ಟ ಮಾದಯ್ಯ ಸ್ವಾಗತಿಸಿ ಶ್ರೀ ಕೆ. ಮಹಾದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಭಾರತಿ ಕಾಲೇಜಿನ ಸೂಪರಿಂಟೆಂಡೆಂಟ್ ಶ್ರೀ ತಿಮ್ಮಯ್ಯನವರು ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ಸಂಘಟನೆಯ ಧ್ಯೇಯಧೋರಣೆ ಕಾರ್ಯಕ್ರಮ ವಿವರಿಸಿದರು. ಮಂಡಲ ಪಂಚಾಯಿತ್ತಿ ಸದಸ್ಯ ಹೆಚ್.ಜಿ. ಚೌಡಶೆಟ್ಟಿ ಸಭೆಯಲ್ಲಿ ಮಾತನಾಡಿದರು. ಘಟಕಕ್ಕೆ ಕಾ. ನಾಗರಾಜ (ಅಧ್ಯಕ್ಷ) ಕಾ. ಶಿವಲಿಂಗು ಪುಟ್ಟಮಾದಯ್ಯ (ಉಪಾಧ್ಯಕ್ಷರು) ವೆಂಕಟೇಶ್ (ಕಾರ್ಯದರ್ಶಿ) ಎಂ. ಪುಟ್ಟಮಾದಯ್ಯ (ಸಹ ಕಾರ್ಯದರ್ಶಿಗಳು) ಕೃಷ್ಣ (ಖಜಾಂಚಿ) ಯಾಗಿರುವ 15 ಜನರ ಸಮಿತಿ ರಚಿಸಲಾಯಿತು. ಎಸ್.ಎಫ್.ಐ.ಮುಖಂಡ ಕಾ. ಜಿ. ರಾಮಕೃಷ್ಣ ವಂದನಾರ್ಪಣೆ ಮಾಡಿದರು.

ಪಜಿರು ಘಟಕ ಸಮ್ಮೇಳನ

ಮಂಗಳೂರು ಪಜೀರು ಪ್ರದೇಶದ ಡಿ.ವೈ.ಎಫ್.ಐ. ಘಟಕ ಸಮ್ಮೇಳನ ಸೆಪ್ಟೆಂಬರ್ 13 ರಂದು ಜಿಲ್ಲಾ ಉಪಕಾರ್ಯದರ್ಶಿ ರಮೇಶ್ ಉಳ್ಳಾಳ್‌ರ ಉದ್ಘಾಟನೆಯೊಂದಿಗೆ ಆರಂಭಗೊಂಡಿತು. ಕಾರ್ಯದರ್ಶಿ ಅಶೋಕ್ ಚಟುವಟಿಕೆ ಮಂಡಿಸಿದರು. ತಾಲ್ಲೋಕು ಉಪಾಧ್ಯಕ್ಷ ನಾರಾಯಣ, ಬಂಗೇರ ಮಾತನಾಡಿದರು. ವಿಕ್ಟರ್ ಪಿಗ್ರೆದೋ ಅಧ್ಯಕ್ಷತೆ ವಹಿಸಿದ್ದರು. ಕಾ.ವೆಂಕಪ್ಪ ಬಂಗೇರ (ಅಧ್ಯಕ್ಷ) ಸೀತಾರಾಮ (ಉಪಾಧ್ಯಕ್ಷ) ಅಶೋಕ (ಕಾರ್ಯದರ್ಶಿ) ಸದಾಶಿವ (ಉಪ ಕಾರ್ಯದರ್ಶಿ) ಪಾವುಲ್ ಆಂದ್ರಾದೆ (ಖಜಾಂಚಿ) ಹಾಗೂ 15 ಜನರ ಕಾರ್ಯಕಾರಿ ಸಮಿತಿ ಆರಿಸಲಾಯಿತು. ಕೊನೆಯಲ್ಲಿ ಕಾ. ಗಣೇಶ ವಂದಿಸಿದರು.

ಬಸ್ರೂರು ರೈತ ಸಂಘದ ಸಭೆ

ಕುಂದಾಪುರ ತಾಲ್ಲೋಕಿನ ಬಸ್ರೂರ್ ಮತ್ತು ಬಳ್ಕೂರು ಪ್ರದೇಶದ ರೈತ ಕೃಷಿ-ಕೂಲಿಗಾರರ ಸಭೆ ಸೆ. 20ರಂದು ಕಾ. ಭಾಸ್ಕರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿತು, ಜಿಲ್ಲಾ ಕಾರ್ಯದರ್ಶಿ ಕಾ. ಅಬ್ರಹಾಂ ಕರ್ಕಡ, ತಾಲ್ಲೋಕು ಕಾರ್ಯದರ್ಶಿ ದಾಸಭಂಡಾರಿಯವರು ರೈತರ ಸಮಸ್ಯೆಗಳು–ಹೋರಾಟ ಕುರಿತು ಮಾತನಾಡಿದರು. ಭಾಸ್ಕರ್ ಶೆಟ್ಟಿ (ಅಧ್ಯಕ್ಷ) ಗೋಪಾಲ ಪೂಜಾರಿ (ಉಪಾಧ್ಯಕ್ಷ) ಗೋಪಾಲ ಶೆಟ್ಟಿಗಾರ್ (ಕಾರ್ಯದರ್ಶಿ) ಸುಬ್ರಮಣ್ಯ (ಸಹ ಕಾರ್ಯದರ್ಶಿ) ಯವರನ್ನೊಳಗೊಂಡ 26 ಮಂದಿಯ ಹೊಸ ಸಮಿತಿ ರಚಿಸಲಾಯಿತು. ಕಾ. ಬೋಜ ಸ್ವಾಗತಿಸಿ, ಗೋಪಾಲ ಶೆಟ್ಟಿ ವಂದಿಸಿದರು.

ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರ

(5ನೇ ಪುಟದಿಂದ)

ಕಠಿಣ ಕ್ರಮಗಳನ್ನು ಅಂದರೆ ಇನ್‌ಕ್ರಿಮೆಂಟ್ ಕಡಿತ, ಎಚ್ಚರಿಕೆ ನೀಡುವುದು ಇತ್ಯಾದಿ ಕೈಗೊಳ್ಳುವುದು ವಾಡಿಕೆಯಾಗಿತ್ತು. ಅಷ್ಟೇಕೆ 10-15 ನಿಮಿಷ ಯಾರಾದರು ಸೀಟಿನಲ್ಲಿ ಇಲ್ಲದಿದ್ದರೆ, ವೇಜ್‌ನ ಕಡಿತ ಮಾಡಲಾಗುತ್ತಿತ್ತು. ಇವೆಲ್ಲವನ್ನೂ ನೌಕರರು 'ನುಂಗಿ' ಕೊಳ್ಳುತ್ತಾ ಬಂದಿದ್ದರು. ಅದರ ಆಸ್ಫೋಟನೆಯೇ ಆಗೋಸ್ಟು 21 ರಿಂದ ಆರಂಭಗೊಂಡ ಮುಷ್ಕರ.

ನೌಕರರ ಬೇಡಿಕೆಗಳು ಬಹಳ ಜವಾಬ್ದಾರಿಯುತವಾಗಿತ್ತು. ಅಮಾನತು ವಾಪಾಸ್ಸು ತೆಗೆಯಿರಿ ವಿಚಾರಣೆ ಮುಂದುವರಿಸಿ 'ಕಾನೂನು' ಪ್ರಕಾರ ಅಮಾನತು ಶಿಕ್ಷೆಯಲ್ಲಿ ಮೇಲೆ ಹೇಳಿದ ಮೂವರು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರೆ, ವಿಚಾರಣೆಗೆ ಯಾವ ತರಹದ ಅಡ್ಡಿಯೂ ಬರುವುದಿಲ್ಲ. ಹಾಗಾದರೆ ಅಮಾನತು ವಾಪಾಸ್ಸು ತೆಗೆಯದಿರಲು ಕಾರಣ?

ಮಾರ್ಕೆಟ್‌ನಲ್ಲಿ ಧಾರಣೆ ಹೆಚ್ಚುತ್ತಿರುವಾಗ ಅದಕ್ಕೆ ಅನುಗುಣವಾಗಿ ವೇತನ ವೃದ್ಧಿ ಆಗಬೇಕೆಂಬ ಬೇಡಿಕೆ ಈಗಾಗಲೇ ಇಡಲಾಗಿದೆ. ಈ ಹೋರಾಟದಲ್ಲಿ ನೌಕರರು ಜಯ ಗಳಿಸಿದರೆ ಮುಂದೆ ತಮಗೆ ತೊಂದರೆ ಆಗಬಹುದೆಂದು ಆಡಳಿತ ವರ್ಗಕ್ಕೆ ಚಿಂತೆ, ಅಷ್ಟೆ ಅಲ್ಲ ಹೋರಾಟದ ಮುಂಚೂಣಿಯನ್ನು ಹಿಡಿದವರು ಕಾ.ಅಶೀಸ್‌ಸೇನ್ ನೇತೃತ್ವದ ಎ. ಐ. ಆರ್. ಬಿ. ಇ. ಎ. ಈ ಮುಖಂಡತ್ವದಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ಬಿ.ಇ.ಎಫ್.ಐ. ಸಂಘಟನೆ ಹೊಸದಾಗಿ ಹುಟ್ಟಿಕೊಂಡರೂ ಹೋರಾಟದ ಮಧ್ಯೆ ದೊಡ್ಡದಾಗಿ ಬೆಳೆಯುತ್ತಿವೆ. ಸೆಪ್ಟೆಂಬರ್ 2ನೇ ತಾರೀಖುನಂದು ಒಂದು ದಿನದ ಮುಷ್ಕರದ ಕರೆ ನೀಡುವುದರೊಂದಿಗೆ ವಾಣಿಜ್ಯ ಬ್ಯಾಂಕುಗಳ ಮೇಲಿನ ಒಪ್ಪಂದದಲ್ಲಿ ಬಿ.ಇ.ಎಫ್.ಐ.ಯನ್ನು ಮಾತುಕತೆಗೆ ಕರೆಯಬೇಕೆಂದು ಬಲವಾಗಿ ಪ್ರತಿಪಾದಿಸಿದೆ.

ಏನೇ ಆದರೂ ರಿಸರ್ವ್ ಬ್ಯಾಂಕ್ ನೌಕರರು ಅವರ ಹೋರಾಟದಲ್ಲಿ ಜಯಗಳಿಸುವುದರಲ್ಲಿ ಸಂಶಯವಿಲ್ಲ. 37 ದಿನಗಳ ಮುಷ್ಕರದ ನಂತರವೂ ಕಾರ್ಯಕರ್ತರಲ್ಲಿ ಉತ್ಸಾಹ ಕುಗ್ಗಿಲ್ಲ. ನಂತರವೂ ಅಖಿಲ ಭಾರತ ಮಟ್ಟದಲ್ಲಿ ಸೌಹಾರ್ದ ಮುಷ್ಕರಗಳನ್ನು ಮಾಡಿರುವುದೇ ಅಲ್ಲದೆ ಧನ ಸಹಾಯ ಸಹ ಬರುತ್ತಿದೆ.

ಇತ್ತ ಬೆಂಗಳೂರಿನಲ್ಲಿ ಕಾರ್ಮಿಕ ವರ್ಗ 'ನಾವೆಲ್ಲ ಒಂದೇ' ಎಂಬಂತೆ ಒಗ್ಗಟ್ಟಿನ ಬೆಂಬಲ ಸೂಚಿಸಿದ್ದಾರೆ. ರ್‍ಯಾಲಿ, ರಾಜ್‌ಭವನ ಚಲೋ, ಇತರ ಕಾರ್ಯಕ್ರಮಗಳೊಂದಿಗೆ ಪ್ರತಿದಿನ ವಿವಿಧ ಸಂಘಟನೆಗಳಿಂದ ಧರಣಿ ಮುಷ್ಕರ ನಡೆಯುತ್ತಿದೆ.

ತನ್ಮಧ್ಯೆ ಈ ಹಲವಾರು ವಿಷಯಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿದೆ. ರಾಜ್ಯದಲ್ಲಿ ಜನತಾ ಪಕ್ಷದ ವರಿಷ್ಟರು ಮುಷ್ಕರಕ್ಕೆ ನಮ್ಮ ಬೆಂಬಲ ಎಂದು ಧರಣಿಕುಳಿತುಕೊಂಡರೂ ಪೋಲೀಸ್ ಪಡೆಯನ್ನು ರಿಸರ್ವ್‌ಬ್ಯಾಂಕ್ ಆವರಣದಿಂದ ವಾಪಸ್ಸು ಮಾಡದಿರುವುದೇಕೆ ? ಅಷ್ಟೇ ಅಲ್ಲ, ಬ್ಯಾಂಕ್ ಆವರಣದಲ್ಲಿ ಮೈಕ್ ಬಳಸುವ ಅಧಿಕಾರಕ್ಕೆ ಸಹ ಎಡೆ ಇಲ್ಲ. 'ಇಂಟಕ್' ನಾವು ಕೆಲಸಗಾರರ ಒಳಿತಿಗಾಗಿ ಎಂದು ಬಡಾಯಿ ಕೊಚ್ಚಿದರೂ, ರಿಜರ್ವ್ ಬ್ಯಾಂಕ್ ನೌಕರರ ಹೋರಾಟಕ್ಕೆ ಬೆಂಬಲ ಇಲ್ಲ. ಬಿ. ಎಂ. ಎಸ್. ರಾಷ್ಟ್ರೀಯ ಪ್ರಚಾರಸಮಿತಿಯಲ್ಲಿದ್ದರೂ ಬೆಂಗಳೂರಿನಲ್ಲಿ ಬೆಕ್ಕಿನ ಬಿಡಾರ ಬೇರೇಯೇ?

ಕೇಂದ್ರ ಸರಕಾರದ ಹಣಕಾಸು ಖಾತೆಯ ಸ್ಟೇಟ್‌ಸಚಿವ ಜನಾರ್ಧನ ಪೂಜಾರಿಯವರು ಬೆಂಗಳೂರಿನಲ್ಲಿಯೇ ಬಿಡಾರ ಮಾಡಿದ್ದರು ಸಹ ಮುಷ್ಕರದ ಬಗ್ಗೆ 'ನೋಕಾಮೆಂಟ್' ಯಾಕೆ?

ಅಧಿಕಾರ ವರ್ಗ ಮತ್ತು ಅವರ ಏಜೆಂಟರ ಬಣ್ಣ ಹೋರ ನಡೆಸಿದಾಗ ಬೆಳಕಿಗೆ ಬರುತ್ತದೆ. ಕಾರ್ಮಿಕ ವರ್ಗಹೊಸ ಅನುಭವ ಪಡೆಯುತ್ತಿದೆ. ಹೋರಾಟದ ತೀವ್ರತೆ ಹೆಚ್ಚುತ್ತಿದೆ.

'ಕಾರ್ಮಿಕರೆಂದಿಗೂ ಸೋಲೋದಿಲ್ಲ ಗೆಲ್ಲುವವರೆಗೆ ಹೋರಾಟ' ಎಂಬ ಘೋಷಣೆಗಳೊಂದಿಗೆ ರಿಸರ್ವ್ ಬ್ಯಾಂಕ್ ನೌಕರರು ಮುಷ್ಕರ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಹೋರಾಟಕ್ಕೆ ಜಯವಾಗಲಿ ಒಗ್ಗಟ್ಟು ಚಿರಾಯುವಾಗಲಿ ಎಂಬುದೆ ನಮ್ಮೆಲ್ಲರ ಸೌಹಾರ್ದ ಬೆಂಬಲದ ಆಶಯ.

[7ನೇ ಪುಟದಿಂದ]

ಪರಿಗಣಿಸಿ ತೆರಿಗೆಯಿಂದ ವಿನಾಯಿತಿ ನೀಡಿತ್ತು. ಆದರೆ ತೆರಿಗೆ ಅಧಿಕಾರಿಗಳು ಈ ತಿಂಗಳ ಮೊದಲ ಭಾಗದಲ್ಲಿ ತೆರಿಗೆ ಕಟ್ಟದೆ ಪಟಾಕಿಗಳನ್ನು ಹೊರಕ್ಕೆ ಸಾಗಿಸಲು ಅನುಮತಿ ನೀಡುವುದಿಲ್ಲವೆಂದು ತಿಳಿಸಿದ್ದಾರೆ. ಇದರಿಂದಾಗಿ 20 ಕೋಟಿ ರೂಪಾಯಿ ಪಟಾಕಿಗಳು ಅಲ್ಲೇ ದಾಸ್ತಾನುಗೊಂಡಿದೆ. ಇದರಿಂದಾಗಿ ಉದ್ಯಮದಲ್ಲಿ ತೀವ್ರ ಬಿಕ್ಕಟ್ಟು ತಲೆದೋರಿದೆ. ಈ ಮಧ್ಯೆ ತೆರಿಗೆ ಇಲಾಖೆ ಪಟಾಕಿ ಉತ್ಪಾದನಾ ತೆರಿಗೆಯನ್ನು ತೀರ್ಮಾನಿಸಿ ಪ್ರಕಟಿಸಿದೆ. 15 ಲಕ್ಷದಿಂದ 75 ಲಕ್ಷದವರೆಗಿನ ಉತ್ಪಾದನೆಗೆ ಶೇಖಡಾ 5ರಷ್ಟು ತೆರಿಗೆ ಮತ್ತು ಅದಕ್ಕಿಂತ ಮೇಲಿನ ಉತ್ಪಾದನೆಗೆ ಶೇ. 15ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಪಟಾಕಿ ಉದ್ಯಮಗಳ ಮಾಲಕರು ಇದನ್ನು ವಿರೋಧಿಸಿದ್ದಾರೆ. ಪಟಾಕಿ ಉದ್ಯಮದಲ್ಲಿ ಇದುವರೆಗೆ ಯಂತ್ರ ಶಕ್ತಿಯ ಬಳಕೆ ಇರಲಿಲ್ಲವಾದ್ದರಿಂದ ಸುಂಕ ವಿನಾಯಿತಿ ನೀಡಲಾಗಿತ್ತು. ಆದರೆ ಈಗ ಪಟಾಕಿ ಉತ್ಪಾದನೆಗೆ ವಿದ್ಯುತ್ ಬಳಸಲಾಗುತ್ತಿದೆಯೆಂಬ ನೆಪವೊಡ್ಡಿ ತೆರಿಗೆ ವಿಧಿಸಲಾಗಿದೆ. ಅದೂ ಅಲ್ಲದೆ ಸೆ. 17 ರಂದು ತೆರಿಗೆ ಪ್ರಮಾಣವನ್ನು ಪ್ರಕಟಿಸಿದ್ದರೂ ಪ್ರಕಟನೆಯ ದಿನಾಂಕಕ್ಕೆ ಮುಂಚಿನ ಆರು ತಿಂಗಳ ತೆರಿಗೆಯನ್ನು ಒತ್ತಾಯಿಸಲಾಗಿದೆ. ಇದರಿಂದಾಗಿ ಉದ್ಯಮವನ್ನು ಮುಂದುವರಿಸುವುದು ಸಾಧ್ಯವಾಗದ ಪರಿಸ್ಥಿತಿಯೊದಗಿದೆಯೆಂದು ಮಾಲಕರ ಸಂಘ ಹೇಳಿಕೆ ನೀಡಿದೆ. 200 ಕಾರ್ಖಾನೆಗಳು ಮುಚ್ಚಲ್ಪಟ್ಟಿದೆ. ಇದರಿಂದಾಗಿ ಕಾರ್ಮಿಕರು ಉದ್ಯೋಗವನ್ನು ಕಳೆದುಕೊಂಡು ಕಕ್ಕಾಬಿಕ್ಕಿಯಾಗಿ ಮುಂದೇನು? ಎಂದು ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದಾರೆ. ದೀಪಾವಳಿಗೆ ಇನ್ನು ಕೆಲವೇ ದಿನವೇ ಉಳಿದಿದ್ದು ಒಂದು ವೇಳೆ ಕೊನೆಗಳಿಗೆ ಕಾರ್ಖಾನೆಗಳು ಆರಂಭವಾಗಿ ಪಟಾಕಿಗಳು ಮಾರುಕಟ್ಟೆಗೆ ಬಂದರೂಕೂಡಾ ಅವುಗಳ ಬೆಲೆ ವಿಪರೀತ ಹೆಚ್ಚಿ ಜನಸಾಮಾನ್ಯರೂ ಕೊಳ್ಳಲಾಗದೆ ಹೋಗಬಹುದೆಂದು ನಿರೀಕ್ಷಿಸಲಾಗಿದೆ.

ತೆರಿಗೆಯನ್ನು ರದ್ದುಪಡಿಸಿ ಕಾರ್ಖಾನೆಗಳು ತೆರೆಯುವಂತಾಗಿ ತಮಗೆಲ್ಲಾ ಉದ್ಯೋಗ ಸಿಗಬೇಕೆಂದು ಒತ್ತಾಯಿಸಿ 30ಸಾವಿರ ಕಾರ್ಮಿಕರು ಮೆರವಣಿಗೆ ನಡೆಸಿದರು. ಸಿ.ಐ.ಟಿ.ಯು. ಪರವಾಗಿ ಕಾ.ಜೆ.ಲಾಜರ್ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಸಹಾಯಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಿ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕೆಂದು ಒತ್ತಾಯಿಸಿತು.

ದ. ಆಫ್ರಿಕದಲ್ಲಿ ಕಲಿಸಲಾಗುತ್ತಿರುವ ಚರಿತ್ರೆ ಪಾಠ ಹೇಗಿದೆ ?

“ಹಿಟ್ಲರ್‌ನಲ್ಲಿ ಹಲವಾರು ಒಳ್ಳೆಯ ಗುಣಗಳಿದ್ದವು. ಫ್ಯಾಸಿಸಂನಿಂದಾಗಿ ಬಂಡವಾಳಶಾಹಿ ಉಳಿದುಕೊಂಡಿತು, ಒಳ್ಳೆಯ ಮನುಷ್ಯರೆಂದರೆ ಕಮ್ಯುನಿಸ್ಟರನ್ನು ದ್ವೇಷಿಸುವವರು ಮಾತ್ರ; ವರ್ಣಭೇದ ನೀತಿ ಕ್ರೈಸ್ತ ಧರ್ಮ ಬೋಧಿಸುವ ನ್ಯಾಯ ಮತ್ತು ಸತ್ಯದ ಮೇಲೆ ಆಧರಿಸಲ್ಪಟ್ಟಿದೆ”–ಇದನ್ನು ಯಾರೋ ತಲೆ ಕೆಟ್ಟ ಮನುಷ್ಯ ಹೇಳುತ್ತಿದ್ದಾನೆಂದು ಭಾವಿಸಬೇಡಿ. ಇದು ದ.ಆಫ್ರಿಕಾದ ಟ್ರಾನ್ಸ್‌ವಾಲ್ ಶಿಕ್ಷಣ ಇಲಾಖೆ ಅಲ್ಲಿನ ಶಾಲಾ ಮಕ್ಕಳಿಗಾಗಿ ನಿಗದಿಪಡಿಸಿರುವ ಚರಿತ್ರೆ ಪಠ್ಯ ಪುಸ್ತಕದಲ್ಲಿರುವ ಪಾಠ.

ದ.ಆಫ್ರಿಕಾದ ವಿದ್ಯಾರ್ಥಿಗಳಿಗೆ ಅಲ್ಲಿನ ಸರಕಾರದ ಟೆಲಿವಿಶನ್, ವಾರ್ತಾ ಪತ್ರಿಕೆಗಳು ಮತ್ತು ಇತರ ಪ್ರಚಾರ ಮಾಧ್ಯಮಗಳನ್ನು ಬಿಟ್ಟರೆ ಪ್ರಪಂಚದ ಆಗು ಹೋಗುಗಳ ಬಗ್ಗೆ ತಿಳುವಳಿಕೆ ಪಡೆಯುವ ಉಳಿದ ಎಲ್ಲ ಅವಕಾಶಗಳನ್ನೂ ಅಲ್ಲಗಳೆಯಲಾಗಿದೆ. ಈ ಸಂಕುಚಿತ ಪ್ರಚಾರ ಕಾರ್ಯಕ್ಕೆ ತಿಲಕ ವಿಟ್ಟಂತೆ ಸರಕಾರ ಸಿದ್ಧಪಡಿಸಿರುವ ಪಾಠ ಪುಸ್ತಕಗಳು ಚರಿತ್ರೆಯ ಬಗ್ಗೆ ರೋಗಿಷ್ಟ ತಿಳುವಳಿಕೆಯನ್ನು ಮಕ್ಕಳ ತಲೆಯೊಳಗೆ ತುರುಕಿಸುತ್ತಿದೆ. ಇತಿಹಾಸ ಪಾಠ ಪುಸ್ತಕಗಳಲ್ಲಿರುವ ಇನ್ನೂ ಕೆಲವು ಆಣಿ ಮುತ್ತುಗಳು ಹೇಗಿವೆ ನೋಡಿ.

“ಇಟಲಿಯ ಜನ ಮುಸೋಲೋನಿಯ ಅಧಿಕಾರವನ್ನು ಸ್ವಾಗತಿಸಿದಂತೆಯೇ ಜರ್ಮನಿಯ ಜನ ಕೂಡಾ ನಾಜೀ ಆಡಳಿತೆ ತಮ್ಮ ಒಳಿತಿಗಾಗಿ ಇದೆಯೆಂದು ಭಾವಿಸಿದ್ದರು. ಹಿಟ್ಲರ್ ಅತ್ಯಂತ ಪ್ರಭಾವಶಾಲಿಯಾದ ಭಾಷಣಕಾರನಾಗಿದ್ದ. ಆತ ಕಮ್ಯುನಿಸಂನ ವಿರುದ್ಧ ನಡೆಸಿದ ಪರಿಣಾಮಕಾರಿಯಾದ ಪ್ರಚಾರದ ಮೂಲಕ ಕೈಗಾರಿಕೋದ್ಯಮಿಗಳು, ರೈತರು, ಸೈನಿಕರು, ಕಾರ್ಮಿಕರು, ವ್ಯಾಪಾರಿ ವರ್ಗಗಳು ಮತ್ತು ಯುವ ಜನತೆಯ ಒಲವನ್ನು ಸಂಪಾದಿಸಿದ್ದ. ಜರ್ಮನಿಯನ್ನು ಅಂಧಕಾರದ ಯುಗದಿಂದ ಬಿಡುಗಡೆಗೊಳಿಸಲು ತಾನು ಏನು ಮಾಡಲೂ ಸಿದ್ಧವಿರುವೆನೆಂದು ಆತ ತೋರಿಸಿಕೊಟ್ಟಿದ್ದ.”

“ಇಟಲಿ ಮತ್ತು ಜರ್ಮನಿ ಇವೆರಡರಲ್ಲೂ ಸಂಭವಿಸಬಹುದಾಗಿದ್ದ ಕಮ್ಯುನಿಸ್ಟ್ ಕ್ರಾಂತಿಗೆ ವಿರುದ್ಧವಾಗಿ ಫ್ಯಾಸಿಸಂ ಬೆಳೆದು ಬಂತು. ಹಿಂಸಾತ್ಮಕ ಬದಲಾವಣೆಗಳನ್ನು ವಿರೋಧಿಸುತ್ತಿದ್ದ ಎಲ್ಲ ವರ್ಗದ ಜನ ಫ್ಯಾಸಿಸ್ಟರ ಪ್ರಬಲ ರಾಷ್ಟ್ರೀಯ ಮನೋಭಾವಕ್ಕಾಗಿ ಅವರನ್ನು ಬೆಂಬಲಿಸಿದರು. ಬಂಡವಾಳಶಾಹಿಯ ರಕ್ಷಣೆ ಸಾಧ್ಯವಾದದ್ದು ಬಹುಮಟ್ಟಿಗೆ ಫ್ಯಾಸಿಸಂನಿಂದಲೇ”

“ಇಡೀ ಜಗತ್ತು ಇಂದು ಮಾರ್ಕ್ಸ್‌ವಾದಿ ಸರ್ಕಾರಗಳು ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರಗಳೆಂಬ ಎರಡು ಪರಸ್ಪರ ವಿರೋಧಿಗಳಾದ ಬಣಗಳಾಗಿ ವಿಂಗಡನೆ ಹೊಂದಿದೆ” ಎಂದೂ ಈ ಪುಸ್ತಕಗಳಲ್ಲಿ ಬರೆಯಲಾಗಿದೆ.

ಮಿತಿಮೀರಿದ ವ್ಯಾಕರಣ ದೋಷಗಳನ್ನೊಳಗೊಂಡಿರುವ ಇಂತಹ ಚರಿತ್ರೆ ಪುಸ್ತಕಗಳು ವಿಶ್ವಸಂಸ್ಥೆಯನ್ನು ದೂಷಿಸಿವೆ. ಅಂತರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ದ.ಆಫ್ರಿಕಾಕ್ಕೆ ಸಾಕಷ್ಟು ನೆರವು ನೀಡಿರುವ ಕಾರಣ ಅದನ್ನು ಶ್ಲಾಘಿಸಿವೆ. ಜಗತ್ತಿನ ಎಲ್ಲ ಕಡೆ ಕಮ್ಯುನಿಸ್ಟರು ಗಲಭೆ ಯುಂಟು ಮಾಡುವವರೆಂದೂ ಕರಿಯ ಜನ ರಾಜಕೀಯ ಅಧಿಕಾರ ಪಡೆಯಲು ಶಕ್ತರಾಗುವ ಮೊದಲೇ ಅಂತಹ ಅಧಿಕಾರ ಅವರ ಕೈಗೆ ಬಂದರೆ ಅವರು ತೀವ್ರ ಪಶ್ಚಾತ್ತಾಪ ಪಡುವವರೆಂದೂ ಹೇಳಲಾಗಿದೆ.

“ದ.ಆಫ್ರಿಕಾದ ಕರಿಯರನ್ನು ಬಿಳಿಯರ ವಿರುದ್ಧ ಎತ್ತಿ ಕಟ್ಟುತ್ತಿರುವವರು ಕಮ್ಯುನಿಸ್ಟರೇ. ವಿದ್ಯಾವಂತ ಕರಿಯರು ಕಮ್ಯುನಿಸ್ಟರ ಪ್ರಚಾರ ತಂತ್ರಕ್ಕೆ ಸುಲಭದಲ್ಲೇ ಬಲಿ ಬೀಳುತ್ತಾರೆ”

“ಶಾರ್ಪ್ ವಿಲೆಯಲ್ಲಿ ಮತ್ತು ಕಾಟೋಮೆನೊರ್ ನಡೆದ ಘಟನೆಗಳಿಂದಾಗಿ ದ.ಆಫ್ರಿಕಾ ಸರ್ಕಾರವು ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಮತ್ತು ಪಾನ್ ಆಫ್ರಿಕನ್ ಕಾಂಗ್ರೆಸ್‌ಗಳನ್ನು ನಿಷೇಧಿಸಬೇಕಾಯಿತು. ನಿಜ ಹೇಳಬೇಕೆಂದರೆ ಇವೆರಡೂ ಸಂಘಟನೆಗಳಿಗೆ ಕರಿಯರ ನಡುವೆ ಯಾವುದೇ ಬೆಂಬಲ ಇಲ್ಲ” ಎಂದಿರುವ ಪಾಠ ಪುಸ್ತಕ ಹಿಟ್ಲರ್, ಮುಸೋಲೋನಿ ಮತ್ತು ದ.ಆಫ್ರಿಕಾ ಸರಕಾರವನ್ನು ಹೊಗಳಿ ಉಳಿದೆಲ್ಲರನ್ನೂ ಅದರಲ್ಲೂ ಕಮ್ಯುನಿಸ್ಟರನ್ನು ಎಲ್ಲ ಅವಾಂತರಗಳಿಗೂ ಕಾರಣರೆಂದು ನಿಂದಿಸಿದೆ. ಇದನ್ನೆಲ್ಲ ಬರೆದಿರುವ ಪಠ್ಯ ಪುಸ್ತಕದ ಲೇಖಕ ಸಿ.ಜೆ.ಜೋಬರ್ಟ್ ಏನನ್ನುತ್ತಾನೆ ಗೊತ್ತೆ ?” “ಚರಿತ್ರೆ ಪಾಠ ಪುಸ್ತಕ ಬರೆಯುವ ಲೇಖಕ ವಿಷಯವನ್ನು ಆದಷ್ಟು ವಸ್ತುನಿಷ್ಟವಾಗಿ ಬರೆಯುವುದಕ್ಕೆ ಪ್ರಯತ್ನಿಸಬೇಕು. ಆದರೂ ಕೆಲವು ವಿಷಯಗಳಿಗೆ ಆತ ತನ್ನದೇ ನಿರೂಪಣೆ ನೀಡಬೇಕಾಗುತ್ತದ. ಆದುದರಿಂದ ಚರಿತ್ರೆ ಪುಸ್ತಕಗಳಲ್ಲಿ ವಿಷಯವನ್ನು ಇದ್ದದ್ದು ಇದ್ದ ಹಾಗೆ ಬರೆಯೋಕೆ ಸಾಧ್ಯವಾಗಲಾರದು ಎನ್ನುವುದನ್ನು ದ.ಆಫ್ರಿಕಾದ ಶಿಕ್ಷಣ ಇಲಾಖೆ ಒಪ್ಪಿಕೊಂಡಿದೆ” ಅಂತೆ ಬೋಥಾ ಸರಕಾರ ಎಂತಹ ಸತ್ಯವಾದಿ!

ಬ್ರಿಟನ್‌ನಲ್ಲಿ ಹೆಚ್ಚುತ್ತಿರುವ ಜನಾಂಗ ದ್ವೇಷ

ಬ್ರಿಟಿಷ್ ಸರಕಾರ ಇತ್ತೀಚೆಗೆ ಬಹಿರಂಗ ಪಡಿಸಿರುವ ವರದಿಯ ಪ್ರಕಾರ ಬ್ರಿಟನ್‌ನಲ್ಲಿ ಜನಾಂಗದ್ವೇಷದ ವಿಷ ವ್ಯಾಪಕವಾಗಿ ಹರಡುತ್ತಿದೆ. ಜನಾಂಗೀಯ ಸಮಾನ್‌ತಾ ಸಮಿತಿ ನೀಡಿರುವ ಈ ವರದಿಯಂತೆ ಏಶ್ಯಾ ಖಂಡದಿಂದ ಬಂದಿರುವವರು ಮತ್ತು ಕರಿಯರ ಪಾಲಿಗೆ ಸುರಕ್ಷಿತವೆನ್ನಿಸುವ ಸ್ಥಳಗಳು ಲಂಡನ್‌ನ ಆಸುಪಾಸಿನಲ್ಲಿ ದಿನೇ ದಿನೇ ಕಮ್ಮಿಯಾಗುತ್ತಿವೆ. ಬ್ರಿಟನ್ನಿನ ಜನಸಂಖ್ಯೆಯ ಶೇಕಡಾ ಐದರಷ್ಟಿರುವ ಏಶಿಯನ್ನರು ಮತ್ತು ಕರಿಯರ ಮೇಲೆ ಶ್ವೇತ ವರ್ಣೀಯರ ಆಕ್ರಮಣಗಳು ಮತ್ತು ದಬ್ಬಾಳಿಕೆ ವ್ಯಾಪಕ ಪ್ರಮಾಣದಲ್ಲಿ ಹೆಚ್ಚುತ್ತಿದೆಯೆಂದೂ ವರದಿಯಲ್ಲಿ ಹೇಳಲಾಗಿದೆ. ಅನೇಕ ಕಡೆ ಈ ಜನಾಂಗೀಯ ಅಲ್ಪ ಸಂಖ್ಯಾತರು ಭೀತಿಯ ವಾತಾವರಣದಲ್ಲೇ ಬದುಕಿದ್ದಾರೆ. ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಅವರು ವಾಸಿಸುತ್ತಿರುವ ಫಿಂಚ್ಲಿ ಕ್ಷೇತ್ರದ ಆಸುಪಾಸಿನಲ್ಲೇ ಇದು ಅತಿ ಹೆಚ್ಚಾಗಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಕರಿಯರು ಮತ್ತು ಏಶಿಯನ್ನರ ಮೇಲಾದ ಆಕ್ರಮಣಗಳ ಸಂಖ್ಯೆಯೇ 1289 ರಷ್ಟು ಎನ್ನಲಾಗಿದೆ. ಜನಾಂಗೀಯ ಅಲ್ಪಸಂಖ್ಯಾತರಿಗೆ ಭದ್ರತೆ ಒದಗಿಸುವಲ್ಲಿ ಸರ್ಕಾರ ವಿಫಲವಾದುದರ ಬಗ್ಗೆ ಈ ಸಮಿತಿ ಗಂಭೀರ ಕಳವಳ ವ್ಯಕ್ತಪಡಿಸಿದೆ.

ಅಫಘಾನ್ ಕ್ರಾಂತಿ ಶತ್ರುಗಳಿಗೆ ಮತ್ತಷ್ಟು ಶಸ್ತ್ರಾಸ್ತ್ರ

ಪಾಕಿಸ್ತಾನದಲ್ಲಿ ಅಡಗಿಕೊಂಡು ಅಫಘಾನಿಸ್ತಾನದ ಕ್ರಾಂತಿಕಾರಿ ಸರಕಾರದ ವಿರುದ್ಧ ಭಯೋತ್ಪಾದನೆಯಲ್ಲಿ ನಿರತರಾಗಿರುವ ಬಂಡುಕೋರರಿಗೆ ದೀರ್ಘ ವ್ಯಾಪ್ತಿಯ ಮೋಟಾರುಗಳು ಮತ್ತು ಸ್ಫೋಟಕಗಳನ್ನೊಳಗೊಂಡಂತೆ ಅಪಾರ ಪ್ರಮಾಣದ ಮಾರಕ ಆಯುಧಗಳನ್ನು ಸರಬರಾಜು ಮಾಡಲು ರೀಗನ್ ಸರಕಾರ ಸಮ್ಮತಿಸಿದೆ. “ದಕ್ಷಿಣ ಏಶಿಯಾ ಪ್ರದೇಶದಲ್ಲಿ ಪಾಕಿಸ್ತಾನವೇ ಅಮೇರಿಕದ ಅತ್ಯಂತ ನಿಕಟ ಸ್ನೇಹಿತ. ಅಫಘಾನ್ ಬಂಡುಕೋರರಿಗೆ ನೆರವು ನೀಡಲು ಪಾಕಿಸ್ತಾನದಷ್ಟು ನಂಬುಗೆಯ ಬಂಟ ಬೇರಾರೂ ಇಲ್ಲ” ವೆಂದು ಶಸ್ತ್ರಾಸ್ತ್ರ ನೆರವು ಸಮಿತಿಯ ಅಧ್ಯಕ್ಷ ರಿಪಬ್ಲಿಕನ್ ಪಕ್ಷದ ಜಾನ್.ಜಿ. ಟವರ್ ಹೇಳಿದ್ದಾರೆ. ಅವರ ಪ್ರಕಾರ ಪಾಕಿಸ್ತಾನ ಅಣುಬಾಂಬನ್ನು ಸಿದ್ಧಪಡಿಸಲು ಮುಂದಾಗಿರುವುದು ಅಷ್ಟೇನೂ ಕಳವಳಕಾರಿಯಲ್ಲವಂತೆ. ಯಾಕೆಂದರೆ ಭಾರತದ ಅಣುಸಾಮರ್ಥ್ಯದ ಬಗ್ಗೆ ಪಾಕಿಸ್ತಾನಕ್ಕೆ ಅಂಜಿಕೆ ಇರುವುದು ಸಹಜವೇ. ಹಾಗಾಗಿ ಪಾಕಿಸ್ತಾನ ಅಣುಬಾಂಬು ನಿರ್ಮಿಸಬಾರದೆನ್ನುವ ವಾದದಲ್ಲಿ ಹುರುಳಿಲ್ಲವೆಂದು ಜಾನ್ ಟವರ್ ಅಪ್ಪಣೆ ಕೊಡಿಸಿದ್ದಾರೆ !

ಅಲ್ಬೇನಿಯಾ ಒಂದು ಇಣುಕು ನೋಟ.

ಕಮ್ಯುನಿಸ್ಟ್ ಅಲ್ಬೇನಿಯಾ ಒಂದು ಕಾಲದಲ್ಲಿ ಅತ್ಯಂತ ದರಿದ್ರವೆನಿಸಿದ್ದ ರಾಷ್ಟ್ರ, ಆದರೆ ಇಂದು ಅಲ್ಲಿ ಯಾವುದೇ ಅಂಗಡಿಗಳ ಮುಂದೆ ‘ಕ್ಯೂ’ ಕಾಣುತ್ತಿಲ್ಲ. ರಾಜಧಾನಿ ಟಿರಾನಾದಲ್ಲಿ ಎಂದೂ ‘ಟ್ರಾಫಿಕ್ ಜಾಮ್’ ಇರುವುದೇ ಇಲ್ಲ. ಜಗತ್ತಿನ ಎಲ್ಲ ದೇಶಗಳ ರಾಜಧಾನಿಗಳ ಪೈಕಿ ಟಿರಾನಾದಲ್ಲಿ ‘ಶಬ್ದ ಮಾಲಿನ್ಯ’ ಮತ್ತು ಹೊಗೆಯ ಹಾವಳಿ ಅತ್ಯಂತ ಕಡಿಮೆ.

ಕೃಷಿಯ ಕ್ಷೇತ್ರದಲ್ಲಿ ಅಲ್ಬೇನಿಯಾ ಸ್ವಾವಲಂಬನೆ ಗಳಿಸಿದೆ. ದೇಶದ ಮೂರು ಮಿಲಿಯ ಜನರಿಗೆ ಹೊಸ ತರಕಾರಿ ಮತ್ತು ಹಣ್ಣು ಹಂಪಲುಗಳು ಧಾರಾಳವಾಗಿ ಸಿಗುತ್ತಿದೆ. ಅಲ್ಬೇನಿಯಾದ ಜನ ‘ತೆರಿಗೆ ರಹಿತ ಸ್ವರ್ಗ’ದಲ್ಲಿದ್ದಾರೆ. ಪ್ರಜೆಗಳು ಇಲ್ಲಿ ತೆರಿಗೆ ಅಥವಾ ಸುಂಕ ಕೊಡಬೇಕಾಗಿಯೇ ಇಲ್ಲ. ಇದು ಅಲ್ಬೇನಿಯಾದ ಸಂವಿಧಾನದಲ್ಲೇ ನೀಡಲಾಗಿರುವ ಹಕ್ಕು.

(ಎಲೆಕ್ಸ್‌ವಾರ್‌ಮತ್-ಡಿ.ಪಿ.ಎ. ಫೀಚರ್ಸ್)

ರಾಜಸ್ತಾನ್ : ‘ಸಹಗಮನ’ ವಲ್ಲ ಕೊಲೆ !

ರಾಜಸ್ತಾನದ ಸಿಕಾರ್ ಜಿಲ್ಲೆಯ ದೇವರಾಲ ಗ್ರಾಮದಲ್ಲಿ ಸತ್ತ ಪತಿಯ ಚಿತೆಯೊಡನೆ ರೂಪಾಕನ್ವರ್ ಎಂಬ 18 ವರ್ಷದ ಯುವತಿ ಸ್ವಇಚ್ಛೆಯಿಂದ ಸಹಗಮನ ಮಾಡಿದಳೆಂಬ ಕೋಲಾಹಲಕರ ಸುದ್ದಿ ವರದಿಯಾಗಿದೆಯಲ್ಲವೇ? ಆ ತರುಣಿ ಸ್ವರ್ಗ ಸೇರುವ ಬಯಕೆಯೊಡನೆ ತಾನೇ ಸ್ವಇಚ್ಛೆಯಿಂದ ಈ ತೀರ್ಮಾನ ಕೈಗೊಂಡುದಾಗಿಯೂ, ನಗುನಗುತ್ತಲೇ ಆಕೆ ಉರಿಯುವ ಚಿತೆಗೆ ಧುಮುಕಿದಳೆಂದೂ ಹೇಳಲಾಗುತ್ತಿದೆ.

ಆದರೆ ಇದೊಂದು ಪೂರ್ವಯೋಜಿತ ಕೊಲೆಯೆಂಬುದರಲ್ಲಿ ಈಗ ಯಾವುದೇ ಅನುಮಾನ ಉಳಿದಿಲ್ಲ.

ರೂಪಕನ್ವರ್ ಅನ್ನು ಬಲವಂತವಾಗಿ ಗಂಡನ ಚಿತೆಯೊಡನೆ ಮಲಗುವಂತೆ ಒತ್ತಾಯಿಸಲಾಯಿತೆಂದು ತಿಳಿದು ಬಂದಿದೆ. ಆಕೆಯ ಮೇಲೆ ಭಾರವಾದ ಕಟ್ಟಿಗೆಯ ತುಂಡುಗಳನ್ನು ಜೋಡಿಸಿ ಆಕೆ ಅಲುಗಾಡಲು ಸಾಧ್ಯವಾಗದಂತೆ ಮಾಡಲಾಯಿತು. ನಂತರ ಚಿತೆಗೆ ಅಗ್ನಿಸ್ಪರ್ಶ ಮಾಡಿ ಅದು ಧಗಧಗನೆ ಉರಿಯತೊಡಗಿದಾಗ ಆಕೆ ಉರಿಯನ್ನು ತಾಳಲಾಗದೆ ‘ಕಾಪಾಡಿ ಕಾಪಾಡಿ’ ಎಂದು ಆರ್ತಳಾಗಿ ಚೀರಿದಳೆಂದು ತಿಳಿದು ಬಂದಿದೆ. ಆದರೆ ಆಕೆಯ ಚೀರಾಟ ಕೇಳಿಸಬಾರದೆಂದು ಸುತ್ತ ನೆರೆದ ಮತಾಂಧ ಪಿಶಾಚಿಗಳು ಮಂತ್ರ ಘೋಷಗಳನ್ನು ತಾರಕ ಸ್ವರದಲ್ಲಿ ಉಚ್ಛರಿಸ ತೊಡಗಿದರು.

ರೂಪಾಕನ್ವರ್‌ಳ ಗಂಡನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಬಂದಿದ್ದ ಕೆಲವು ಬಂಧುಗಳಿಗೇ ಸಹಗಮನದ ವಿಷಯವೇ ತಿಳಿದಿರಲಿಲ್ಲವಂತೆ. ಕೊನೆಗಳಿಗೆಯಲ್ಲಿ ವಿಷಯ ತಿಳಿದ ಕೆಲವು ಬಂಧುಗಳು ಅದನ್ನು ಪ್ರತಿಭಟಿಸಲು ಸಾಧ್ಯವಾಗದೆ ವಾಪಸ್ಸು ಹೊರಟು ಹೋದರಂತೆ.

ಈಗ ರೂಪಕನ್ವರಳ ಗಂಡನ ಮನೆಗೆ ಭಕ್ತರು ಗುಂಪುಗುಂಪಾಗಿ ಬರ ತೊಡಗಿದ್ದಾರೆ. ರೂಪಾಳ ಮಾವ ಭಕ್ತರಿಗೆ ಪ್ರಸಾದ ಹಂಚುತ್ತಿದ್ದಾರೆ. ಕಾಣಿಕೆಗಳೂ ಚೆನ್ನಾಗಿ ವಸೂಲಾಗುತ್ತಿವೆಯಂತೆ. ರೂಪಳ ಇಚ್ಛೆಗೆ ವಿರುದ್ಧವಾಗಿ ಆಕೆಯನ್ನು ಬಲವಂತದಿಂದ ಚಿತೆಯೊಡನೆ ಸುಟ್ಟು ಕೊಲೆ ಮಾಡಲಾಯಿತೆಂಬುದು ಬೆಳಕಿಗೆ ಬಂದಿದೆ.

ಮಂಗಲ್‌ವಾಡಿ ಎಂಬ ಲೇಖಕರೊಬ್ಬರು ತನಿಖೆ ನಡೆಸಿ ಮೇಲ್ಕಂಡ ವಿವರಗಳನ್ನು ಸೆ.19ರ ‘ಇಂಡಿಯನ್ ಎಕ್ಸ್‌ಪ್ರೆಸ್’ ಪತ್ರಿಕೆಯಲ್ಲಿ ಬರೆದಿದ್ದಾರೆ.

ಮೇಲ್ಕಂಡ ಘಟನೆಗಳನ್ನು ಸುಪ್ರೀಂ ಕೋರ್ಟ್ ವಕೀಲರ ಸಂಘವು ಖಂಡಿಸಿ ಇಂಥ ಘನಘೋರವಾದ ಅಮಾನುಷ ಕೃತ್ಯವನ್ನೆಸಗಿದವರನ್ನು, ಘಟನೆ ನಡೆಯುವಾಗ ಕತ್ತಿ ಹಿಡಿದು ಕಾವಲು ನಿಂತ ಯಾರು ಇದನ್ನು ತಡೆಯದಂತೆ ನೋಡಿಕೊಂಡ ಧರ್ಮಾಂಧರನ್ನು, ಹಾಗೂ ಈ ಕೃತ್ಯವನ್ನು ಒಂದು ಪವಿತ್ರ ಕಾರ್ಯವೆಂದು ಹೇಳಿದವರನ್ನೂ ರಾಜಸ್ತಾನ ರಾಜ್ಯ ಸರ್ಕಾರ ಬಂಧಿಸಿ ಸೂಕ್ತ ಶಿಕ್ಷೆ ನೀಡಬೇಕೆಂದು ಅದು ಒತ್ತಾಯಿಸಿದೆ. ದೇಶದ ಇನ್ನಾವುದೇ ಭಾಗದಲ್ಲೂ ಇಂಥ ಘಟನೆ ನಡೆಯದಂತೆ ಎಚ್ಚರ ವಹಿಸಬೇಕೆಂದು ಅದು ಸರ್ಕಾರಕ್ಕೆ ತಿಳಿಸಿದೆ.

‘ಸತಿ’ ಎಂದು ಕರೆದು ಈ ಕೊಲೆಯಲ್ಲಿ ಕಾಂಗ್ರೆ ಪದಾಧಿಕಾರಿಗಳೇ ಸಹಭಾಗಿಗಳಾಗಿ ಬರಗಾಲದಿಂದ ಸುಟ್ಟು ಕೆಂಪಾಗಿರುವ ರಾಜಸ್ತಾನದಲ್ಲಿ ಮತೀಯ ಮೂಢತನವನ್ನು ಬೆಳೆಸಲು ಪ್ರಯತ್ನಿಸಿದ್ದಾರೆ. ಅದಕ್ಕೆ ಅಲ್ಲಿಯ ಕಾಂಗ್ರೆ ಸರಕಾರವೂ ಸಹಾಯ ಮಾಡಿದೆ. ಇದರ ವಿರುದ್ಧ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನೂರಾರು ಮಹಿಳೆಯರು ಗೃಹಸಚಿವ ಬೂಟಾಸಿಂಗ್ ಮನೆಯ ಮುಂದೆ ಪ್ರದರ್ಶನ ನಡೆಸಿದರು. ಎಲ್ಲ ಮುಗಿದ ಮೇಲೆ ಈಗ ರಾಜೀವ್‌ಗಾಂಧಿ ದೊಡ್ಡ ಗದ್ದಲ ಹಾಕಿದ್ದಾರೆ.

ತಮಿಳುನಾಡು : 30,000 ಕಾರ್ಮಿಕರ ಮೆರವಣಿಗೆ

ಸೆ.24 ರಂದು ಶಿವಕಾಶಿಯಲ್ಲಿ ಪಟಾಕಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ 30,000 ಕಾರ್ಮಿಕರು ಸರ್ಕಾರ ವಿಧಿಸಿರುವ ಹೊಸ ಉತ್ಪಾದನಾ ತೆರಿಗೆಯನ್ನು ಪ್ರತಿಭಟಿಸಿ ಬೃಹತ್ ಮೆರವಣಿಗೆ ನಡೆಸಿದರು. ಹೊಸ ತೆರಿಗೆಯನ್ನು ಖಂಡಿಸಿ ಇಲ್ಲಿನ ಸುಮಾರು 200 ಕಾರ್ಖಾನೆಗಳನ್ನು ಅನಿರ್ದಿಷ್ಟ ಕಾಲದವರೆಗೆ ಮುಚ್ಚಲಾಗಿದೆ. ಇದರಿಂದಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ 60 ಸಾವಿರ ಕಾರ್ಮಿಕರು ತೊಂದರೆಗೀಡಾಗಿದ್ದಾರೆ.

ಪಟಾಕಿ ಉದ್ಯಮವನ್ನು ಕೇಂದ್ರ ಸರ್ಕಾರವು ಗುಡಿ ಕೈಗಾರಿಕೆಯೆಂದು

[6ನೇ ಪುಟ ನೋಡಿ]

REG No. BGW-148 MAG (2) PRB DECR 319/ 78-79

ರಾಜೀವಗಾಂಧಿ ರಾಜೀನಾಮೆಗಾಗಿ ಮಧ್ಯಂತರ ಚುನಾವಣೆಗಾಗಿ ಒತ್ತಾಯಿಸಿ ರಾಜಕೀಯ ಚಳುವಳಿ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರಾಜಕೀಯ ಸಮಾವೇಶ

ಭಾರತದ ಕಮ್ಯುನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯು, ವಿನಾಶಕಾರಕವಾದ ಆರ್ಥಿಕ ನೀತಿಗಳು, ದೇಶದ ಸಮಗ್ರತೆಗೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಸಂದರ್ಭ ಸಾಧಕತನ ಹಾಗೂ ಶಸ್ತ್ರಾಸ್ತ್ರ ವ್ಯವಹಾರಗಳಲ್ಲಿ ಉನ್ನತ ವಲಯದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವ ರಾಜೀವ್ ಸರಕಾರದ ರಾಜೀನಾಮೆ ಹಾಗೂ ಮಧ್ಯಂತರ ಚುನಾವಣೆಗಳಿಗಾಗಿ ಒತ್ತಾಯಿಸಿ ದೇಶಾದ್ಯಂತ ಚಳುವಳಿ ನಡೆಸಬೇಕೆಂದು ಕರೆ ನೀಡಿದೆ.

ಈ ಕರೆಗನುಗುಣವಾಗಿ ಅಕ್ಟೋಬರ್ 25 ರಿಂದ 31 ರವರೆಗೆ ಒಂದು ವಾರ ರಾಜ್ಯಾದ್ಯಂತ ರಾಜೀವ್‌ಗಾಂಧಿಯ ರಾಜೀನಾಮೆಯನ್ನು ಒತ್ತಾಯಿಸಿ ಹಾಗೂ 17 ಬೇಡಿಕೆಗಳ ಸಮಗ್ರ ಕಾರ್ಯಕ್ರಮದ ಆಧಾರದಲ್ಲಿ ರಾಜಕೀಯ ಚಳುವಳಿ ನಡೆಸಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ.

ರಾಜಕೀಯ ಸಮಾವೇಶ

ರಾಜ್ಯಾದ್ಯಂತ ನಡೆಯಲಿರುವ ರಾಜಕೀಯ ಸಮಾವೇಶ ವೇಳಾಪಟ್ಟಿ :

25-10-87 ಬೆಂಗಳೂರು ಜಿಲ್ಲೆಯ ರಾಜಕೀಯ ಸಮಾವೇಶ ಉದ್ಘಾಟನೆ: ಕೇಂದ್ರ ಸಮಿತಿ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಪಿ ರಾಮಚಂದ್ರ ರಾವ್, ಅದೇ ದಿನ ಹಾಸನ, ಹರಿಹರ.

26-10-87 ಮೈಸೂರು, ಬಿಜಾಪುರ, ಬಳ್ಳಾರಿ.

27-10-87 ರಾಯಚೂರು, ಕೊಡಗು, ತುಮಕೂರು.

28-10-87 ಚಿಕ್ಕಮಗಳೂರು, ಗುಲ್ಬರ್ಗ.

29-10-87 ಬೀದರ್, ಶಿವಮೊಗ್ಗ, ಧಾರವಾಡ.

30-10-1987- ಕೋಲಾರ, ಬೆಳಗಾಂ, ಮಂಗಳೂರು.

1.10.87 ಮಂಡ್ಯ,

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಪಿ. ರಾಮಚಂದ್ರ ರಾವ್, ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ, ವಿ.ಜೆ.ಕೆ. ನಾಯರ್, ಎನ್. ಕೆ. ಉಪಾಧ್ಯಾಯ, ಕೆ.ಆರ್. ಶ್ರೀಯಾನ್‌ರವರುಗಳು ಮೂರು ತಂಡಗಳಾಗಿ ಎಲ್ಲಾ ಜಿಲ್ಲೆಗಳ ರಾಜಕೀಯ ಸಮಾವೇಶಗಳಲ್ಲಿ ಪಾಲ್ಗೊಳ್ಳುತ್ತಾರೆ.

ಸಿ. ಐ. ಟಿ. ಯು. ಕರೆ

[ಒಂದನೇ ಪುಟದಿಂದ]

ಗಾಂಧಿ ರಾಜೀನಾಮೆ ಕೊಡಬೇಕು. ಮಧ್ಯಂತರ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯಿಸಿ ಅಕ್ಟೋಬರ್ 25 ರಿಂದ ರಾಜ್ಯಾದ್ಯಂತ ಚಳುವಳಿ ನಡೆಸಲು ರಾಜ್ಯಸಮಿತಿಯು ಸಿ.ಐ.ಟಿ.ಯು. ಸಂಘಗಳಿಗೆ ಕರೆಕೊಟ್ಟಿದೆ. ಬರಗಾಲ ಮತ್ತು ನೆರೆಪರಿಹಾರ

ದೇಶದಲ್ಲಿಯ ಬರ ಮತ್ತು ನೆರೆ ಪರಿಸ್ಥಿತಿಯನ್ನು ಪರಿಗಣಿಸಿದ ಸಭೆಯು ಸಿ.ಐ.ಟಿ.ಯು. ಸದಸ್ಯರು ಒಂದು ದಿವಸದ ಕೂಲಿ ಸಂಬಳವನ್ನು ಬರ ನೆರೆ ಪರಿಹಾರ ನಿಧಿಗೆ ಕೊಡಬೇಕೆಂದು ಕರೆ ಕೊಟ್ಟು 'ರಾಜ್ಯ ಸಮಿತಿಯು ಹದಿನೈದು ಸದಸ್ಯ ಬಲದ ಬರ ಪರಿಹಾರ ಸಮಿತಿಯನ್ನು ರಚಿಸಿದೆ ಈ ನಿಧಿಯನ್ನು ಬರ ನೆಲೆ ಪರಿಹಾರ ಕೆಲಸಗಳಿಗಾಗಿ ರೈತ ಸಂಘಕ್ಕೆ ಕೊಡಲಾಗುವುದು.

ಗೊಂದಲಮಯ ರಾಜಕೀಯ ಪರಸ್ಥಿತಿ

[1ನೇ ಪುಟದಿಂದ]

ಸರ್ಕಾರಿ ಕೈಗಾರಿಕೆಗಳ ಖಾಸಗೀಕರಣ

ಜೊತೆಗೆ ಸರಕಾರಿ ಕಾರ್ಖಾನೆಗಳು ಒಂದಾದ ಮೇಲೊಂದು ನಷ್ಟಕ್ರೀಡಾಗುತ್ತಿವೆ. ಅಲ್ಲಿಯ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಖಾನೆಗಳನ್ನು ಲಾಭದಾಯವಾಗಿ ನಡೆಸುವ ಕ್ರಮ ಕೈಗೊಳ್ಳುವ ಬದಲಾಗಿ, ಸರಕಾರದ ವಕ್ತಾರರು ಮುಖ್ಯವಾಗಿ ಕೈಗಾರಿಕಾ ಮಂತ್ರಿಯವರು ಖಾಸಗೀ ಮಾಲೀಕರ ಕೈಗಿಡಲು ಎಲ್ಲಾ ನಿಯಮಗಳನ್ನು ಮೀರಿ ಧಾವಿಸುತ್ತಿದ್ದಾರೆ. ರಾಜೀವ್ ಗಾಂಧಿ ಸರ್ಕಾರದ 'ಖಾಸಗೀಕರಣದ' ಹಾದಿಯನ್ನೇ ತುಳಿಯುತ್ತಿದ್ದಾರೆ.

ಶಿಕ್ಷಣ-ನಿರುದ್ಯೋಗ

ಕ್ಯಾಪಿಟೇಷನ್ ಪ್ರಶ್ನೆಯು ವರ್ಷದಿಂದ ವರ್ಷಕ್ಕೆ ಮುಂದಕ್ಕೆ ಹಾಕುತ್ತಿದ್ದಾರೆ. ಇದರ ವಿರುದ್ಧ ವಿದ್ಯಾರ್ಥಿಗಳ ಚಳುವಳಿ ವರ್ಷದಿಂದ ವರ್ಷಕ್ಕೆ ತೀವ್ರವಾಗುತ್ತಾ ನಡೆದಿದೆ.

ನಿರುದ್ಯೋಗದ ಪ್ರಶ್ನೆಯೂ ತೀವ್ರವಾಗಿದೆ. ಯುವಕರನ್ನು ಹೋರಾಟದ ಹಾದಿಗೆ ಹಚ್ಚುತ್ತಿದೆ. ಕರ್ನಾಟಕ ಸರ್ಕಾರ ಈ ಇಕ್ಕಟ್ಟಿನ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಜನತೆಯ ಎಲ್ಲಾ ವಿಭಾಗಗಳ ಮೇಲೆ ಹೊರೆ ಹೇರುತ್ತಿದೆ.

ಈ ಹಿನ್ನೆಲೆಯಲ್ಲಿ ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ನಿರ್ದಿಷ್ಟ ಬೇಡಿಕೆಗಳನ್ನು ರೂಪಿಸಿ ನಿರಂತರ ಹೋರಾಟ ಕೈ ಗೊಳ್ಳಬೇಕು ಜನತಾ ಪಕ್ಷದ ಸರಕಾರವು ಸರಿಯಾದ ದಾರಿಗೆಬರುವಂತೆ ಮಾಡಬೇಕು ಪ್ರಯತ್ನಿಸಬೇಕು.

ಭ್ರಷ್ಟಾಚಾರದ ಆಪಾದನೆಗಳು

ಇದೇ ವೇಳೆ ರಾಮಕೃಷ್ಣ ಹೆಗಡೆಯವರ ಮೇಲೇನೆ ಬರುತ್ತಿರುವ "ಭ್ರಷ್ಟಾರದ ಆಪಾದನೆಗಳು" ಇನ್ನುಷ್ಟು ರಾಜಕೀಯ ಗೊಂದಲಕ್ಕೆ ಕಾರಣವಾಗಿದೆ.

ಭ್ರಷ್ಟಾಚಾರದ ಕುರಿತು ಬಂದ ಆಪಾದನೆಗಳನ್ನು ಪರಿಶೀಲನೆ ಮಾಡಿ ಕೂಡಲೇ ಈ ಬಗ್ಗೆ ಜನತೆಯ ಮನಸ್ಸಿನಲ್ಲಿ ಬಂದಿರುವ ಸಂಶಯ ನಿವಾರಣೆಗೆ ಕ್ರಮ ವಹಿಸಬೇಕೆಂದು ಸಮಿತಿಯು ರಾಜ್ಯದ ಜನತಾ ಸರ್ಕಾರವನ್ನು ಒತ್ತಾಯಿಸುತ್ತದೆ.

ಮಣ್ಣಿನ ಮಕ್ಕಳ ವಾದ

ಸರೋಜಿನಿ ಮಹಿಷಿ ವರದಿಯು ರಾಜ್ಯದಲ್ಲಿ ಭಾಷೆ, ಮಣ್ಣಿನ ಮಕ್ಕಳಿಗೆ ಕೆಲಸ ಎಂಬಿತ್ಯಾದಿ ಪ್ರಶ್ನೆಗಳನ್ನು ಎತ್ತಿ ಛಿದ್ರಕಾರಿ ಶಕ್ತಿಗಳ ಚಳುವಳಿಗೆ ಸಹಾಯಕವಾಗಿದೆ ಎಂದು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಅಭಿಪ್ರಾಯ ಪಡುತ್ತದೆ. ಈ ಕುರಿತು ದೇಶದ ಸಮಗ್ರತೆ ಮತ್ತು ಐಕ್ಯತೆಯ ದೃಷ್ಟಿಯಿಂದ ಜನತಾ ಪಕ್ಷವು ದೇಶದಾದ್ಯಂತದ ರಾಜಕೀಯ ಬೆಳವಣಿಗೆಯ ದೃಷ್ಟಿಯಲ್ಲಿಟ್ಟು ಈ ಸಂಕುಚಿತ ಭಾವನೆಗಳ ಬೆಳವಣಿಗೆಗೆ ಕೂಡಲೇ ತಡೆ ಹಾಕಲು ಕ್ರಮ ಕೈಗೊಳ್ಳಬೇಕೆಂದು ಸಮಿತಿ ಒತ್ತಾಯಿಸುತ್ತದೆ.

ಕೇಂದ್ರ ಸರ್ಕಾರದ ಧೋರಣೆ ಮತ್ತು ದೃಷ್ಟಿಕೋನ ರಾಜ್ಯ ಜನತೆಯ ಹಿತಕ್ಕೆ ಮಾರಕವಾಗಿದೆ ಎಂಬುದನ್ನು ಮರೆಯದೆರಾಜ್ಯ ಸರ್ಕಾರ ನೀತಿಗಳನ್ನು ಬದಲಾಯಿಸುವುದಕ್ಕಾಗಿ, ಹಾಗೂ ಜನ ವಿಭಾಗಗಳ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟದ ಹಾದಿಯಲ್ಲಿ ಮುನ್ನಡೆಯಬೇಕು.

ಈ ವಾರ....

★ ನಾವು ವಿರೋಧ ಪಕ್ಷದವರು ಮೊದಲು ನೀರಿಗೆ ಧುಮುಕಿ ನಂತರ ಈಜಲು ಕಲಿಯುತ್ತೇವೆ, ವಿರುದ್ಧ ಕ್ರಮದಲ್ಲಲ್ಲ

– ಜ್ಯೋತಿಬಸು

★ ಎಡಪಕ್ಷಗಳು ಬಿ.ಜೆ.ಪಿ.ಜೊತೆ ಪಂಕ್ತಿಯಲ್ಲಿ ಎಲ್ಲಲು ಅಡ್ಡವಾಗಿ ನಿಂತಿರುವ ಕಾರಣ ಸುಲಭವಾಗಿ ಪರಿಹಾರ ವಾಗುವಂತಹದ್ದಲ್ಲ. ಯಾವುದೇ ಕೋಮುವಾದಿ ಪಕ್ಷಗಳ ಜೊತೆ ಸಹವಾಸ ಕೂಡದೆಂಬ ಅವುಗಳ ದೃಢ ಜಾತ್ಯಾತೀತ ನಿಲುವು ಆ ಪಕ್ಷಗಳಿಗೆ ಕೇರಳದಲ್ಲಿ ಒಳ್ಳೆಯ ಲಾಭ ತಂದುಕೊಟ್ಟಿದೆ.

ರಾಜೀವ್‌ಗಾಂಧಿ ಸರ್ಕಾರದ ವಿರುದ್ಧ ಕಮ್ಯುನಿಸ್ಟ್ ಪಕ್ಷಗಳಲ್ಲದ ಯಾವುದೇ ಪ್ರತಿಪಕ್ಷ ಕೂಟಕ್ಕೆ ಮಹತ್ವ ಊನವಾಗುವುದು ನಿಜ. ಆದ್ದರಿಂದಲೇ ಹರಿಯಾಣ ಮುಖ್ಯಮಂತ್ರಿ ದೇವಿಲಾಲರು ಸೇರಿಸಿದ್ದ ಸೂರಜ್ ಕುಂಡ್ ಸಭೆ ಪ್ರತಿ ಪಕ್ಷಗಳ ದೃಷ್ಟಿಯಿಂದಲೇ ಮಹತ್ವ ಪೂರ್ಣ ಎಂದು ಹೇಳಲಾಗುವುದಿಲ್ಲ.

—'ಪ್ರಜಾವಾಣಿ' ಸಂಪಾದಕೀಯ

★ ರೋಮ್‌ನ ಉರಿಯುತ್ತಿದ್ದಾಗ ನೀರೋ ಪಿಟೀಲು ಬಾರಿಸುತ್ತಿದ್ದನಂತೆ. ಹಾಗೆ ರಾಜಸ್ಥಾನ್ ಬರದಿಂದ ಬೇಯುತ್ತಿರುವಾಗ ಎಲ್ಲಾ ರಾಜಕಾರಣಿಗಳು ಯಜ್ಞ, ಪ್ರತಿಯಜ್ಞ ಗಳನ್ನು ತಮ್ಮ ಬೇಳೆ ಬೇಯಿಸಿಕೊಳ್ಳಲು ಆಚರಿಸುತ್ತಿರುವುದು ಅತ್ಯಂತ ಹಾಸ್ಯಾಸ್ಪದ

—ಕೆ.ಎನ್.ಮೆನನ್, ಕೇರಳ ವೀಕ್ ವಾಚಕರವಾಣಿಯಲ್ಲಿ.

ಬಿ. ಜೆ. ಪಿ. – ಕೇವಲ ಕಾಗದದ ಹುಲಿ

[1ನೇ ಪುಟದಿಂದ]

ಕೋಮುವಾದದಿಂದಾಗಿ ನಾವು ದೂರವಿದ್ದಾರೆ ಆದ್ದರಿಂದ ಬಿ.ಜೆ.ಪಿ.ಯ ಬೆಂಬಲದಿಂದ ಕಾಂಗ್ರೆಸ್ಸನ್ನು ಸೋಲಿಸಬಹುದೆಂಬ ಆಸೆಯಿಟ್ಟು ಕೊಂಡಿರುವ ಪಕ್ಷಗಳಿಗೆ ಬಿ ಜೆ.ಪಿಯ ಗೆಳೆತನ ಒಂದು ಚುನಾವಣಾ ವರವಾಗುವಬದಲು ಶಾಪವಾಗುವ ಸಂಭವವೇ ಹೆಚ್ಚು.

ಬಿ.ಜೆ.ಪಿ ಕೂಡಾ ತಾನು ಕಮ್ಯುನಿಸ್ಟ್‌ರೊಂದಿಗೆ ಎಂದೂ ಸೇರಿಕೊಳ್ಳುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಯಾಕೆಂದರೆ ಆದರ ಹಿಂದೂ ರಾಷ್ಟ್ರ ಸಿದ್ಧಾಂತಕ್ಕೂ ಕಮ್ಯುನಿಸ್ಟರ ವಿದೇಶಾಂಗ ಹಾಗೂ ಆಂತರಿಕ ಧೋರಣೆಗಳಿಗೂ ಸರಿಬೀಳುವುದಿಲ್ಲ. ಅಷ್ಟೇ ಅಲ್ಲ ಮುಸ್ಲಿಂ, ಸಿಖ್ ಹಾಗೂ ಕ್ರಿಶ್ಚಿಯನ್ ಮೂಲಭೂತವಾದಿಗಳೂ, ಹಿಂದೂ ಕೋಮುವಾದದ ಜೊತೆಗೆ ಪೈಪೋಟಿ ನಡೆಸಿದ ಜನತಾ ಪ್ರಯೋಗವನ್ನು ಮರುಕಳಿಸಿ ಕೂಡಾ ಬಿ.ಜೆ.ಪಿ.ಗೆ ಬೇಡವಾಗಿದೆ. ಅವರಿಗೆ ಬೇಕಾಗಿರುವುದು ಹಿಂದೂ ಮತಗಳನ್ನು ಕ್ರೋಢೀಕರಣವಷ್ಟೆ.

ಆದ್ದರಿಂದ ಬಿ.ಜೆ.ಪಿ.ಯೂ ಸೇರಿದ ಕಾಂಗ್ರೆಸ್ಸೇತರ ರಂಗಬೇಕೆನ್ನುವವರು ವಾಸ್ತವಿಕತೆಯಿಂದ ಬಹಳ ದೂರದಲ್ಲಿದ್ದಾರೆ. ಎಂದು ಕಾ.ಇ.ಎಂ.ಎಸ್ ಪಿಪಲ್ಸ್ ಡೆಮೊಕ್ರಸಿಯಲ್ಲಿ ಪ್ರಕಟವಾಗಿರುವ ಇನ್ನೊಂದು ಲೇಖನದಲ್ಲಿ ಹೇಳಿದ್ದಾರೆ.

ಎಡಪಕ್ಷಗಳ ಸೆಪ್ಟೆಂಬರ್ 15 ರ ಸಭೆಗೆ ಎಂದಿನಂತೆ ಪ್ರತಿಕ್ರಿಯೆ ತೋರಿಸುವ ಕಾಂಗ್ರೆಸ್(ಐ)' ಬಿ.ಜೆ.ಪಿ. ಅಥವಾ ತೆಲಗುದೇಶಂ ಆಗಲೀ ಅಥವಾ ಸಿ.ಪಿ.ಐ(ಎಂ)ತನ್ನ ಗಂಭೀರ ಆಂತರಿಕ ವೈರುಧ್ಯಗಳಿಂದಾಗಿ ಖಂಡಿತಾ ತನ್ನ ನಿಲುವು ಬದಲಿಸಿ ಬಿ.ಜೆ.ಪಿ.ಯ ಜತೆಗೂಡಲಿದೆ." ಎಂದು ಇಂಡಿಯನ್‌ಎಕ್ಸ್‌ಪ್ರೆಸ್‌ನಲ್ಲಿ ವಿಶದವಾಗಿ ವಾದಿಸಿರುವ ಹಿರಣ್ಮಯ ಕಾರ್ಲೇಕರ್‌ರಂತಹವರಾಲೀ ಜನತಾ ಸರ್ಕಾರದ ರಚನೆ ಕಾರ್ಯನಿರ್ವಹಣೆ ಹಾಗೂ ಪತನದಿಂದ ಪಾಠಕಲಿತಂತಿಲ್ಲ ಎಂದು ಇ.ಎಂ.ಎಸ್ ಹೇಳಿದ್ದಾರೆ.

ಮುಖಂಡತ್ವದ ಒಂದು ವಿಭಾಗ ಆರ್.ಎಸ್.ಎಸ್‌ನೊಂದಿಗೆ ಹೊಂದಿರುವ ಸಂಬಂಧದಿಂದಾಗಿ ಕುಸಿದು ಬಿದ್ದ 1977-79ರ ಜನತಾ ಪ್ರಯೋಗದ ಬಗ್ಗೆ ಬರೆಯುತ್ತಾ ಅವರು ಎಡಪಕ್ಷಗಳು ಇತರ ಜಾತ್ಯಾತೀತ ವಿರೋಧ ಪಕ್ಷಗಳು ಮತ್ತು ರಾಜೀನಾಮೆನೀಡಿದ ಅಥವಾ ಹೊರಹಾಕಲ್ಪಟ್ಟ ಕಾಂಗ್ರೆಸಿಗರು ಜತೆಗೂಡಿ ಕಾಂಗ್ರೆಸನ್ನು ಸೋಲಿಸುವಲ್ಲಿ ಒಂದು ಸಮರ್ಥ ಪರ್ಯಾಯ ರಚಿಸಲು ಸಾಧ್ಯ ಎಂದು ಹೇಳಿದ್ದಾರೆ. ಇದು ಕೇವಲ ಹಗಲುಗನಸ್ಸಲ್ಲ ಎಂಬುದನ್ನು 1983-84ರ ಶ್ರೀನಗರ, ಕಲ್ಕತ್ತಾ ಸಮ್ಮೇಳನಗಳು ಹಾಗೂ ನಂತರದ ಘಟನೆಗಳಿಂದ ಕಾಣಬಹುದು ಎಡಪಕ್ಷಗಳು ಯೋಜಿಸಿದಂತೆ ಆ ಎರಡು ಸರ್ವಸಮ್ಮತ ದಸ್ತಾವೇಜುಗಳು ಈಗ ಜಂಟಿ ಕಾರ್ಯಾಚರಣೆಯ ಆಧಾರವಾಗಬಲ್ಲವು.

ಈಗ ಒಂದೆಡೆ ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ಜಾತ್ಯಾತೀತ ರಾಜಕೀಯ ಪಕ್ಷಗಳ ಜಂಟಿ ಪ್ರಕ್ಷೋಭೆ, ಜತೆಗೆ ಬರ, ನೆರೆ, ಬೆಲೆಯೇರಿಕೆ ಕಾರ್ಖಾನೆ ಮುಚ್ಚುವಿಕೆ ಇತ್ಯಾದಿ ಜ್ವಲಂತ ಪ್ರಶ್ನೆಗಳ ವಿರುದ್ಧ ವಿವಿಧ ಜನ ವಿಭಾಗಗಳು ಸಾಮೂಹಿಕ ಸಂಘಟನೆಗಳ ಜಂಟೀ ಆಂದೋಲನ ಅತ್ಯಗತ್ಯ. ಈ ಕಾರ್ಯಾಚರಣೆಗಳ ಪ್ರಕ್ರಿಯೆಯಲ್ಲಿ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆ ಮೂಡಿ ಬರುತ್ತದೆ. ರಾಜೀವಗಾಂಧಿಯವರನ್ನು ಇಳಿಸಲು ಈ ಐಕ್ಯತೆಅತ್ಯಗತ್ಯ. ಸೂರಜ್‌ಕುಂಡ ಸಭೆಯಲ್ಲಿ ಭಾಗವಹಿಸಿದ ಜಾತ್ಯಾತೀತ ಪಕ್ಷಗಳು ಮತ್ತೆ ಈ ಜಂಟಿ ಕಾರ್ಯಾಚರಣೆಯ ಮಾರ್ಗಕ್ಕೆ ಹಿಂದುರುಗತ್ತಿವೆಯೆಂಬ ಆಶಾಭಾವನೆಯನ್ನು ಇ.ಎಂ.ಎಸ್. ವ್ಯಕ್ತಪಡಿಸಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Editorial and Managerial Office : L-56, K. V. Temple Street,
Sultanpet B-53 Phone : 75331
Editor Ramachandra Rao
Managing Editor : N. K. Upadhyaya